ಶ್ರೀಮಾನ್ ಭೀಮಪ್ಪನಾಯಕರು ಮಾತನಾಡುತ್ತಾ 'ಸರ್ಕಾರದವರು ತಮ್ಮ ಬಸ್ಸುಗಳನ್ನು insure ಮಾಡುತ್ತಿಲ್ಲ, ಒಂದು ವೇಳೆ accidentಗಳೇನಾದರೂ ಆದರೆ ಯಾರ ಮೇಲೆ claimಗಳನ್ನು ಹಾಕಬೇಕೋ ಗೊತ್ತಿಲ್ಲ' ಎಂದು ಹೇಳಿದರು. ಬಹುಶಃ ಅವರು ಬಜೆಟ್ಟನ್ನು ಸರಿಯಾಗಿ ತೆಗೆದು ನೋಡಿಲ್ಲ ಎಂದು ಕಾಣುತ್ತದೆ. Accidental fund ಎಂದು ಹೇಳಿ ಒಂದು ಫಂಡ್ ನ್ನೇರ್ಪಡಿಸಿರುವುದನ್ನು ಕಾಣಬಹುದು.

ಶ್ರೀ ಎಚ್. ಸಿದ್ದವೀರಪ್ಪ.—ಸ್ಪಾಮಿ, ಶ್ರೀ ಎ. ಭೀಮಪ್ಪನಾಯಕರು ಹೇಳಿರತಕ್ಕ ಅಂಶಗಳಲ್ಲಿ ಇನ್ಷೂರೆನ್ಸ್ ಮಾಡಿಸುವ ವಿಚಾರದಲ್ಲಿ ಆಗಲೇ ಶ್ರೀ ರಾಜಶೇಖರಮೂರ್ತಿಯವರು ಹೇಳಿದ್ದಾರೆ. ಅದು ಬಡ್ಜೆಟ್ಟಿನಲ್ಲಿಯೂ ನಮೂದಾಗಿದೆ. ನಮ್ಮಲ್ಲಿರತಕ್ಕ ಬಸ್ಸುಗಳನ್ನು ಇನ್ಷೂರ್ ಮಾಡಿದರೆ ಎಷ್ಟು ಪ್ರೀಮಿಯಂ ಕೊಡಬೇಕಾಗುತ್ತದೆಯೋ ಅಷ್ಟೇ ದುಡ್ಡನ್ನು ತೆಗೆದಿಟ್ಟು accidental fund ಎಂದು ಮಾಡಿದ್ದೇವೆ. ಅದರಲ್ಲಿ ಬೇಕಾದಷ್ಟು ದುಡ್ಡಿದೆ. ಇದಲ್ಲದೆ insurance ಪ್ರೀಮಿಯಂ ದುಡ್ಡನ್ನು ಕೂಡ ಕೊಟ್ಟಿದ್ದೇವೆ. Accidentsಗಳೇನಾದರೂ ಆದರೆ ಯಾವ ರೀತಿ ಕಾನೂನು ಪ್ರಕಾರ ಕೊಡಬೇಕೋ ಅಷ್ಟನ್ನು ಅದರಿಂದ ತೆಗೆದುಕೊಡುತ್ತೇವೆ.

Mr. SPEAKER.—The point is whether it will not amount to discrimination. Why should not the Government insure the same bus in the Government Iusurance Department?

Sri H. SIDDAVEERAPPA.—I have got it examined. But anyway the suggestion will be looked into. I can only say so much.

ಆಮೇಲೆ, overloading ವಿಚಾರದಲ್ಲಿ ಅನೇಕ ಮಾನ್ಯ ಸದಸ್ಯರು ಹೇಳಿದ್ದಾರೆ. ನನಗಂತೂ ಅವರ ವಾದ ಅರ್ಥವಾಗುತ್ತಿಲ್ಲ. ನಿಜವಾಗಿಯೂ overloading ವಿಚಾರದಲ್ಲಿ ಉದಾಸೀನರಾಗಿಲ್ಲ. ಆದರೂ, ಮಾನ್ಯ ಸ್ನೇಹಿತರಾದ ಇಮಾಂರವರಿಗೂ ಗೊತ್ತಿರುವ ಹಾಗೆ, overloading ಎನ್ನುವುದು ಪಾಶ್ಚಾತ್ಯ ದೇಶಗಳಲ್ಲೂ ಸಹ ಇದೆ. ಎಲ್ಲ ಜನಗಳ ಸಂಖ್ಯೆ ಹೆಚ್ಚಾಗಿದೆ ಅಲ್ಲೆಲ್ಲಾ. . . .

*ಶ್ರೀ ಎಸ್. ಗೋಪಾಲಗೌಡ (ಸಾಗರ—ಹೊಸನಗರ).—ಮಾನ್ಯ ಮಂತ್ರಿಗಳು ಹೀಗೆ ಆಗಾಗ್ಗೆ ಸಭೆಯಲ್ಲಿ overloading ಎಂಬುದು ಎಲ್ಲಾ ಕಡೆಯಲ್ಲೂ ನಡೆಯುತ್ತಿದೆ ಎಂದು ಹೇಳುತ್ತಾ ಹೋದರೆ, overloading ಮಾಡುವವರಿಗೆ ಇದು ಒಂದು ರೀತಿಯಲ್ಲಿ ಸಹಾಯಮಾಡಿದಂತಾಗುತ್ತದೆ. ಅದೇ ಸೌತ್ ಕೆನರಾ ಜಿಲ್ಲೆಯಲ್ಲಿ ನೋಡುವುದಾದರೆ, ಅಲ್ಲಿ 21-22 ಸೀಟುಗಳೆಂದಿದ್ದರೆ, ಯಾರೂ ಒಂದು ಸೀಟನ್ನೂ ಕೂಡ ಮೇಲೆ ಹಾಕುವುದಿಲ್ಲ. ಆದ್ದರಿಂದ ಮಾನ್ಯ ಮಂತ್ರಿಗಳು ಈ ರೀತಿ ಪ್ರತಿಪಾದನೆಮಾಡುತ್ತಾ ಪರೋಕ್ಷವಾಗಿ overloadingಗಿಗೆ ಉತ್ತೇಜನ ಕೊಟ್ಟಂತೆ ಹೇಳಿಕೆಗಳನ್ನು ಕೊಡುವುದು ಸರಿಯಾದ ಮಾರ್ಗವಲ್ಲವೆಂದು ಹೇಳುತ್ತೇನೆ.

ಶ್ರೀ ಎಚ್. ಸಿದ್ದವೀರಪ್ಪ.—ಪೂರ್ತಿ ನೀವು ಕೇಳಲಲ್ಲ. Overloading ಆಗಿರುವ ಕೇಸುಗಳೂ ಇವೆ ; ಹಾಗೆಯೇ ಅಲ್ಲಲ್ಲಿ ಅವುಗಳನ್ನು ಕಂಡು ಹಿಡಿದು

Government Road Transport ಬಸ್ಸುಗಳ ಮೇಲೆ ಕೇಸುಗಳನ್ನು ಹಾಕಿ ಜುಲ್ಮಾನೆ ಹಾಕಿಸಿರುವ ನಿದರ್ಶನಗಳೂ ಇವೆ. ಈ ವಿಚಾರದಲ್ಲಿ ನಾವು strict order ಮಾಡಿದ್ದೇವೆ. Overload ಮಾಡಿದ್ದೇನಾದರೂ ಸರ್ಕಾರದವರ ಗಮನಕ್ಕೆ ಬಂದರೆ ಅವರ ಮೇಲೆ ಸರಿಯಾದ ಕಾರ್ಯಕ್ರಮ ತೆಗದುಕೊಳ್ಳಬೇಕೆಂದು ಕೂಡ ತಿಳಿಸಿದ್ದೇವೆ.

ಶ್ರೀ ಡಿ. ಆರ್. ಕರಿಗೌಡ (ಹಾಸನ).—ನಿಮ್ಮ ಬಸ್ಸುಗಳ average capacity ಎಷ್ಟು? ಮತ್ತು ನಿಮಗೆ ಒಂದು ಮೈಲಿಗೆ ಎಷ್ಟು collection ಬರುತ್ತಿದೆ?

ಶ್ರೀ ಎಚ್. ಸಿದ್ದವೀರಪ್ಪ.—ಮೈಲಿಗೆ 1 ರೂಪಾಯಿ 2 ಆಣೆ ಬರುತ್ತಿದೆ.

ಶ್ರೀ ಡಿ. ಆರ್. ಕರಿಗೌಡ.—ಈಗ ನಿಮ್ಮ ಬಸ್ಸುಗಳಿಂದ ಮೈಲಿಗೆ 1 ರೂಪಾಯಿ 8 ಆಣೆ ಮೇಲೆ ಬರುತ್ತಾ ಇಲ್ಲವೇ?

ಶ್ರೀ ಎಚ್. ಸಿದ್ದವೀರಪ್ಪ.—ನಾನೇ ಒಪ್ಪಿದ್ದೇನೆ, overloading ಇದೆಯೆಂದು. ಆದರೂ ಆ ಪದ್ಧತಿ ಸರಿಯಲ್ಲ. ನಾನೇನು ಈಗ ಅದನ್ನು substantiate ಮಾಡುತ್ತಿಲ್ಲ. Overloading ಮಾಡಿ ಬೊಕ್ಕನಕ್ಕೆ ಹೆಚ್ಚಿನ ಹಣ ಬರಮಾಡಿಕೊಳ್ಳಬೇಕೆಂಬ ಉದ್ದೇಶ ನಮಗಿಲ್ಲ. ಜನರಿಗೆ amenitiesನ್ನು ಉಂಟುಮಾಡಿ ಕೊಡುವುದು ಮುಖ್ಯವೇ ಹೊರತು ದುಡ್ಡು ಮುಖ್ಯವಲ್ಲ. ಅದಕ್ಕೆ ಅವಕಾಶಕೊಡುವುದಿಲ್ಲವೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀಮಾನ್ ಶ್ರೀನಿವಾಸಯ್ಯಂಗಾರ್ಯರು ಹೊಸ ಆಫೀಸು ಏಕೆ ಬೇಕೆಂದು ಕೇಳಿದರು. ಏಕೆ ಬೇಕೆಂದು ಹೇಳುವುದಕ್ಕೆ ಈ ಸಭೆಯಲ್ಲಿ ಬಂದಿರುವ ಚರ್ಚೆಗಳೇ ಸಾಕಷ್ಟು ಆಧಾರವಾಗಿವೆ. ಟ್ರಾನ್ಸ್‌ಪೋರ್ಟ್ ಕಮಿಷನರಿಗೆ ಒಂದು ಆಫೀಸು ಅತ್ಯಾವಶ್ಯಕವಾಗಿ ಬೇಕು. ಈಗಿರತಕ್ಕ ನ್ಯೂನತೆಗಳನ್ನು ತೆಗೆದು ಎಲ್ಲವನ್ನೂ ಸರಿಪಡಿಸುವುದಕ್ಕೆ ಒಂದು Centralised Officeನ್ನು ಮಾಡಿದರೆ ಸಾಧ್ಯವೇ ಹೊರತು, ಈಗಿರತಕ್ಕ ಪದ್ಧತಿಯಂತೆ ಒಂದು ಕಡೆ S. T. A. ಆಫೀಸು, ಇನ್ನೊಂದು ಕಡೆ R. T. A. ಆಫೀಸು ಇರುವುದರಿಂದ ಸಾಧ್ಯವಿಲ್ಲ. ಈಗ ನಮಗೇನಾದರೂ figures ಬೇಕಾದರೆ 10 ಡಿಸ್ಟ್ರಿಕ್ಟ್‌ಗಳಿಗೂ ಬರೆದು ತರಿಸಿಕೊಳ್ಳಬೇಕು. ಅಲ್ಲದೆ, ಈ ಆಫೀಸನ್ನೇರ್ಪಡಿಸುವುದರಿಂದ ಹೆಚ್ಚಿಗೆ ಖರ್ಚೂ ಕೂಡ ಏನೂ ಆಗುವುದಿಲ್ಲ. ಬಾಕಿ ಡಿಪಾರ್ಟ್‌ಮೆಂಟುಗಳಲ್ಲಿರುವುದನ್ನೇ ಇಲ್ಲಿಗೆ ಅಳವಡಿಸಿಕೊಳ್ಳುತ್ತೇವೆ. ಟ್ರಾನ್ಸ್‌ಪೋರ್ಟ್ ಕಮಿಷನರೇ *Ex-officio* Transport Chairmanರಾಗಿರುತ್ತಾರೆ. ಅವರೇ Executive ಅಧಿಕಾರಿಗಳಾಗಿಯೂ ನಿಂತುಕೊಂಡು ರೋಡ್ ಟ್ರಾನ್ಸ್‌ಪೋರ್ಟ್ ಏಪಾರ್ಡನ್ನು ಒಂದು ಹದಕ್ಕೆ ತರುವುದು ಮುಖ್ಯ. ಮುಖ್ಯವಾಗಿ inspection ಸಾಕಾದಷ್ಟಿಲ್ಲವೆಂದು ಹೇಳಿದ್ದಾರೆ. ನಾನೂ ಅದನ್ನು ಒಪ್ಪುತ್ತೇನೆ. ನಾನೇ ಒಂದು ದಿವಸ ಬೆಂಗಳೂರು ಮಾಗಡಿ ರಸ್ತೆಯಲ್ಲಿ ಬ್ರೇಕ್ ಇನ್‌ಸ್ಪೆಕ್ಟರ ಜೊತೆಯಲ್ಲಿ ಮಾಗಡಿವರೆಗೂ ಹೋದೆ. ಬ್ರೇಕ್ ಇನ್‌ಸ್ಪೆಕ್ಟರನ್ನಿಟ್ಟುಕೊಂಡು 25 ಬಸ್ಸುಗಳನ್ನು ಚೆಕ್ ಮಾಡಿಸಿದೆ. ಹೀಗೆ ನೋಡಿದ್ದರಲ್ಲಿ ಅನೇಕ ನ್ಯೂನತೆಗಳು ಕಂಡುಬಂದುವು. ಅರೀತಿಯಾದದ್ದನ್ನೆಲ್ಲಾ ನೋಡಿಕೊಳ್ಳುವುದಕ್ಕೆ ಒಬ್ಬರು ಟ್ರಾನ್ಸ್‌ಪೋರ್ಟ್ ಕಮಿಷನರು ಇರುವುದು ಅತ್ಯಾವಶ್ಯಕ. ಅವರಿದ್ದರೆ ಇನ್ನೂ ಒಂದು ಅನುಕೂಲವಿದೆ. ಹಾಲಿ ಇದರಲ್ಲಿ ಆದಾಯ ಬರುವಷ್ಟು ಜಮಾನು ಕಂದಾಯದಿಂದಲೂ ಬರುತ್ತಿಲ್ಲ. ಸುಮಾರು ಒಂದು ಕೋಟಿ ರೂಪಾಯಿಗಳವರೆಗೂ ಇದರಿಂದ ಬರುತ್ತಿದೆ. ಸೇಲ್ಸ್ ಟ್ಯಾಕ್ಸ್ ಇಲಾಖೆಯನ್ನು ಬಿಟ್ಟರೆ ನಮಗೆ ಹೆಚ್ಚಿನ ಆದಾಯ ಬರುತ್ತಿರುವುದು ರೋಡ್ ಟ್ರಾನ್ಸ್‌ಪೋರ್ಟ್ ಇಲಾಖೆಯಿಂದ. ಈಗ S.T.A. ಮತ್ತು R.T.A. ಗಳನ್ನು reconstitute ಮಾಡಬೇಕಾದ ಕಾಲ ಬಂದಿದೆ. ಬರುವ ಮೇ ತಿಂಗಳ ಆಖೈರಿಗೆ ಈ ಕಮಿಟಿಗಳ ವಾಯಿದೆ ಮುಗಿಯುತ್ತದೆ. ಆಮೇಲೆ ಅವುಗಳನ್ನು ಮತ್ತೆ ರಚಿಸಬೇಕು. ಆ ಸಂದರ್ಭದಲ್ಲಿ ತಾವುಗಳು ಯಾವ ಯಾವ ರೀತಿ ಹೇಳಿದ್ದೀರೋ,—ಕೆಲವರು ಒಂದೊಂದು ತಾಲ್ಲೂಕಿಗೂ ಒಬ್ಬೊಬ್ಬರು ಇರಬೇಕೆಂದು ಹೇಳಿದರು; ಇನ್ನು ಕೆಲವರು ಸಣ್ಣ ಕಮಿಟಿಗಳನ್ನು ರಚಿಸಬೇಕೆಂದು ಹೇಳಿದರು; ಬೊಂಬಾಯಿ ಮುಂತಾದ ಕಡೆಗಳಲ್ಲಿ ಎರಡು ಅಥವಾ ಮೂರು ಜನ ಸದಸ್ಯರಿರುವಂತೆ ನಾವೂ ಮಾಡಬೇಕೆಂಬ ವಾದವೂ ಬಂತು.—ಇವೆಲ್ಲವನ್ನೂ ನೋಡಿಕೊಂಡು ಪುನಃ ರಚನೆ ಮಾಡುವಾಗ ಯೋಚನೆ ಮಾಡುತ್ತೇವೆ.

ಆಮೇಲೆ, ಖಾಸಗಿ ಬಸ್ಸುಗಳ ಮೇಲೆ ಸಾಕಾದಷ್ಟು ಚೆಕಿಂಗ್ ನಡೆಯುತ್ತಿಲ್ಲ ಎಂದು ಹೇಳಿದರು. ಖಾಸಗಿ ಬಸ್ಸುಗಳ ಸಂಖ್ಯೆ ಹಾಲಿ 1,543ರಷ್ಟಿದ್ದು 45,589 ಮೈಲಿಗಳಷ್ಟು ದೂರ ಓಡಾಡುತ್ತವೆ. ಇಷ್ಟು ಬಸ್ಸುಗಳು ಓಡುವಾಗ ಚೆಕಿಂಗನ್ನು ಇನ್ನಾವ ರೀತಿ ಮಾಡುವುದೋ ಗೊತ್ತಾಗುವುದಿಲ್ಲ.

ಬಸ್ ಪರ್ಮಿಟ್ಟುಗಳನ್ನು ಬದಲಾಯಿಸುತ್ತಾರೆ ಎಂಬ ವಾದ ಬಂತು. ನಾನೂ ಎರಡು ವರ್ಷಗಳಿಂದ ನೋಡುತ್ತಿದ್ದೇನೆ. ಯಾರಾದರೂ ಬೇನಾಮಿಯಾದ ಲೈಸೆನ್ಸನ್ನಿಟ್ಟುಕೊಂಡು ಉಪಯೋಗಿಸುತ್ತಾರೆಯೇ ಎಂದು ನೋಡುತ್ತಿದ್ದೇನೆ.

ಶ್ರೀ ಜಿ. ಶಿವಪ್ಪ.—ಅನೇಕ ಜನ, ಅತಿ ಪ್ರಮುಖ ವ್ಯಕ್ತಿಗಳೇ ಬಸ್ಸುಗಳ ಪರ್ಮಿಟ್ಟನ್ನು ಮಾರಾಟಮಾಡಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಸಿದ್ದವೀರಪ್ಪ.—ಆ ರೀತಿ vague ಆಗಿ general allegations ಮಾಡುವುದರಿಂದೇನೂ ಪ್ರಯೋಜನವಿಲ್ಲ. ಏಕೆಂದರೆ, ನಾನೂ ಇಂಥವುಗಳನ್ನು ಕಂಡುಹಿಡಿಯಬೇಕೆಂದೇ ಎರಡು ವರ್ಷದಿಂದ ಪ್ರಯತ್ನಪಡುತ್ತಿದ್ದೇನೆ. ಡೆಪ್ಯುಟಿ ಕಮಿಷನರುಗಳ ಮೀಟಿಂಗ್ ಕೂಡ ಕರೆದು ಅವರವರ ಜಿಲ್ಲೆಯಲ್ಲಿ ಇಂಥ ಸಂದರ್ಭಗಳು ಯಾವುದಾದರೂ ಇದ್ದರೆ ತಿಳಿಸಬೇಕೆಂದು ಹೇಳಿದ್ದೇನೆ. ಆದರೂ, ಯಾವುದೂ ಇದುವರೆಗೂ ಒಂದೂ ಗಮನಕ್ಕೆ ಬಂದಿಲ್ಲ. ಹಿಂದೆ ಒಂದೇ ಒಂದು ಕೇಸು ಬಂದಿತ್ತು. ಅವರ ಪರ್ಮಿಟ್ಟನ್ನು ವಜಾ ಮಾಡಿದೆವು.

ಈ ಸಂದರ್ಭದಲ್ಲಿ ಇನ್ನೊಂದು ವಿಚಾರವನ್ನು ಈ ಮಾನ್ಯ ಸಭೆಗೆ ಹೇಳಬೇಕಾಗಿದೆ. ಪರ್ಮಿಟ್ಟನ್ನು ಬೇನಾಮಿಯಾಗಿ ಇಟ್ಟುಕೊಂಡು ನಡೆಸಕೂಡದು ಅಷ್ಟೆ. ಒಬ್ಬರ ಹೆಸರಿನಲ್ಲಿರುವ ಪರ್ಮಿಟ್ಟನ್ನು ಇನ್ನೊಬ್ಬರ ಹೆಸರಿಗೆ transfer ಮಾಡುವುದಕ್ಕೆ ಅವಕಾಶವಿದೆ. ಅದಕ್ಕೆ ನಾವೇನೂ ಮಾಡುವುದಕ್ಕಾಗುವುದಿಲ್ಲ. ಅದು ಸರಿಯಾದದ್ದೇ.

ಶ್ರೀ ಬಿ. ವಿ. ನಾರಾಯಣರೆಡ್ಡಿಯವರು.—ಖಾಸಗಿ ಬಸ್ಸುಗಳು ಹೋಗುವ ದಾರಿಗಳಲ್ಲಿ ಸರ್ಕಾರಿ ಬಸ್ಸುಗಳು ಹೋಗುವ ವಿಷಯವನ್ನು ಹೇಳಿದರು. ಇದು ಬಹಳ ಮುಖ್ಯವಾದ ವಿಷಯವೆಂದು ಹೇಳಿ ಒಂದೆರಡು ವಿಚಾರಗಳನ್ನು ಹೇಳುತ್ತೇನೆ.

ಹಾಲಿ monopolised routesನಲ್ಲಿ ನಾವು 8,575 ಮೈಲಿಗಳನ್ನು ಪ್ರತಿದಿನವೂ cover ಮಾಡುತ್ತೇವೆ. Non-monopolised routesನಲ್ಲಿ 5,475 ಮೈಲಿಗಳಷ್ಟು ದೂರ ಬಸ್ಸುಗಳನ್ನು ಓಡಿಸುತ್ತಿದ್ದೇವೆ.

(ಶ್ರೀ ಬಿ. ಏ. ನಾರಾಯಣರೆಡ್ಡಿಯವರು.)

ಒಟ್ಟು 14,000 ಮೈಲಿಗಳ ದೂರ ಸರ್ಕಾರಿ ಬಸ್ಸುಗಳು ಓಡುತ್ತಿವೆ. ನಮ್ಮಲ್ಲಿರುವ 135 ಬಸ್ಸುಗಳಲ್ಲಿ 64 ಬಸ್ಸುಗಳು non-monopolised routesನಲ್ಲಿ ಓಡುತ್ತಿವೆ. ಈ ಪ್ರಕಾರ ಸಂಸ್ಥಾನಾಮಳೆ ಎಲ್ಲಾ ಭಾಗಗಳನ್ನೂ ನಮ್ಮ ಬಸ್ಸುಗಳು cover ಮಾಡುತ್ತಿವೆಯೆಂದು ಹೇಳಬಹುದು. ಬೆಂಗಳೂರು ಜಿಲ್ಲೆಯಲ್ಲ, ತುಮಕೂರು ಜಿಲ್ಲೆಯಲ್ಲಿ—ಎಲ್ಲಾ ಕಡೆಗಳಲ್ಲೂ ಬೇಕಾದಷ್ಟಿವೆ.

ಆದರೆ, ನಾನ್-ಮೊನಾಪಲೈಸ್ಡ್ ರಸ್ತೆಗಳಲ್ಲಿ ಬಸ್ಸನ್ನು ಹಾಕಬೇಕಾದರೆ ಯಾವ ತತ್ವವನ್ನು ಅನುಸರಿಸುತ್ತಿದ್ದೆವೆಂಬುದನ್ನು ಹೇಳುತ್ತೇನೆ. Non-monopolised routesನಲ್ಲಿ ನಿಷ್ಕಾರಣವಾಗಿ ಬಸ್ಸುಗಳನ್ನು ಹಾಕಿ ಖಾಸಗಿಯವರಿಗೆ ತೊಂದರೆ ಮಾಡಬೇಕೆಂಬ ಉದ್ದೇಶ ಸರ್ಕಾರದವರಿಗಿಲ್ಲ. ಆರೀತಿಯಾಗಿ ತೊಂದರೆಯಾಗಿರುವ ಸಂದರ್ಭ ಯಾವುದನ್ನಾದರೂ ನನ್ನ ಗಮನಕ್ಕೆ ತಂದರೆ ಅದನ್ನು ಸರಿಮಾಡುತ್ತೇವೆ. ಸಾಧಾರಣವಾಗಿ non-monopolised routesನಲ್ಲಿ ಹಾಕಿದ್ದರೆ ಅದು ಆ ಸ್ಥಳದ ಜನರ ಒತ್ತಡದಿಂದ, ಅವರಿಂದ ಸರ್ಕಾರಿ ಬಸ್ಸುಗಳನ್ನು ಹಾಕಬೇಕೆಂದು ಕರೆ ಬಂದಾಗ ಹಾಕುತ್ತೇವೆಯೇ ಹೊರತು ಅಲ್ಲಿರತಕ್ಕ ವರಮೇಲೆ ಹೆಚ್ಚುಪೋಟಿ ಮಾಡಬೇಕೆಂಬ ಉದ್ದೇಶ ನಮಗಿಲ್ಲ. ಆ ರೀತಿ ಪರಿಣಾಮದಲ್ಲೇನಾದರೂ ಆಗಿದ್ದರೆ ಅದನ್ನು ಸರಿಪಡಿಸುತ್ತೇನೆಂದು ನಾನು ಈ ಸಂದರ್ಭದಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ಶ್ರೀ ಬಿ. ರಾಚಯ್ಯ (ಎಳಂದೂರು—ಅನುಸೂಚಿತ ಜಾತಿಗಳು).—Non-monopolised routesನಲ್ಲಿ ಓಡಿನತಕ್ಕ ಸರ್ಕಾರಿ ಬಸ್ಸುಗಳ ಮೇಲೆ ಪ್ರೈವೇಟ್ ಬಸ್ಸುಗಳ ಹೈಪೋಟಿ ಮಾಡುತ್ತಿರುವುದರಿಂದ ಸರ್ಕಾರಿ ಬಸ್ಸುಗಳ ಆದಾಯ ಕಡಮೆಯಾಗುತ್ತದೆಯಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ.—ನಾನ್-ಮೊನಾಪಲೈಸ್ಡ್ ರೂಟ್ಸ್‌ನಲ್ಲಿ ಹಾಕಿರುವ ಬಸ್ಸುಗಳನ್ನು periodical ಆಗಿ examine ಮಾಡುತ್ತೇವೆ. ಯಾವುದಾದರೂ ಲೈಸಿನಲ್ಲಿ ಹಣಕಾಸಿನ ಉತ್ಪತ್ತಿ ಸರಿಯಾಗಿ ಆಗದೆ ಇದ್ದರೆ ಅದನ್ನು ವಜಾ ಮಾಡುತ್ತೇವೆ.

ಶ್ರೀ ಬಿ. ರಾಚಯ್ಯ.—Cancel ಮಾಡಲಿ ಎಂತಲೇ ಅವರುಗಳು competition ಮಾಡುತ್ತಿರುತ್ತಾರೆ. ಸಾರ್ವಜನಿಕರ ಹಿತದೃಷ್ಟಿಯಿಂದ ಪೂರ್ತ ಮನಾ ಪೊಲೈಸ್ ಮಾಡುವುದು ಅವಶ್ಯಕವಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ.—Second planನಲ್ಲಿ ಅದು ಬರುತ್ತದೆ. ಈ ರಾಷ್ಟ್ರೀಕರಣ ವ್ಯವಸ್ಥೆಯನ್ನು ಮುಂದುವರಿಸಿಕೊಂಡು ಹೋಗುವುದಕ್ಕೆ ಒಂದು ಪ್ರೋಗ್ರಾಂ ಪ್ರಕಾರ ಕೆಲಸ ಮಾಡಬೇಕೆಂಬುದು ಪ್ಲಾನಿಂಗ್ ಕಮಿಷನ್ನಿನವರ ಆಶಯವಾಗಿದೆ. ನಾವು ಅದನ್ನು ಆಚರಿಸಬೇಕೆಂದಿದ್ದೇವೆ. ಈಗ ಸರ್ಕಾರದವರು ಆ ರೀತಿ ನಡೆಸಬೇಕಾದರೆ Indian Vehicles Actನ 42ನೆಯ ಸೆಕ್ಷನ್ನಿನ ಪ್ರಕಾರ R.T.A.ಯನ್ನು ಕೇಳದೆ ಹಾಕಕೂಡದು. ಎಲ್ಲಿಂದಲಾದರೂ ಕರೆ ಬಂದು ಬಸ್ಸುಗಳನ್ನು ಹಾಕಬೇಕು ಎಂದರೆ ಹಾಕುತ್ತೇವೆ.

ಶ್ರೀಮಾನ್ ಅನಂತರಾಮ್‌ಅವರು ಪದೇ ಪದೇ ಹೇಳುತ್ತಲೇ ಇದ್ದಾರೆ. ಡಿಸ್ಪ್ಯಾಕ್ಟ್ ಜೋರ್ಡಿಗೆ ಈ ಬಗ್ಗೆ ನ್ಯಾಯವಾಗಿ ಬರಬೇಕಾದ ದುಡ್ಡು ಬರುತ್ತಿಲ್ಲವೆಂದು ಹೇಳಿದರು. ಹೀಗೆಯೇ ಟೋಲ್ ಗೇಟುಗಳ ವಿಷಯ ಇದೆ. ಟೋಲ್‌ಗೇಟುಗಳು ಇರುವುದು ನರಿಯೇ ಎಂಬುದನ್ನು ಯೋಚನೆ ಮಾಡಬೇಕಾಗಿದೆ. ಈಗ ಇವುಗಳಿಂದ ಬರತಕ್ಕ ಹಣ ಅಲ್ಲಗೆ ಆಗತಕ್ಕ ಖರ್ಚಿಗೆ ನರಿಯಾಗಿದೆ. ಆದ್ದರಿಂದ ಏಕೆ ಇವುಗಳನ್ನು ಸಂಪೂರ್ಣವಾಗಿ ತೆಗೆಯಕೂಡದೆಂಬುದನ್ನು ಯೋಚನೆ ಮಾಡುತ್ತಿದ್ದೇನೆ. ಈ ಬಗ್ಗೆ ಶೀಘ್ರದಲ್ಲೇ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇವೆಂದು ಹೇಳುತ್ತೇನೆ. ಲೋಕಲ್ ಬಾಡಿಗಳಿಗೆ ಕೊಡಬೇಕಾದ್ದನ್ನು ಶೀಘ್ರದಲ್ಲೇ ಕೊಡುವುದಕ್ಕೆ ಯೋಚನೆ ಮಾಡುತ್ತೇವೆ.

ಶ್ರೀಮಾನ್ ಚಿಕ್ಕಲಿಂಗಯ್ಯನವರು ಬಸ್ ಇನ್‌ಸ್ಪೆಕ್ಷನ್‌ಗಳು ನರಿಯಾಗಿ ಆಗುತ್ತಿಲ್ಲವೆಂದು ಹೇಳಿದರು. ಇದು ಆಲೋಚನೆ ಮಾಡಬೇಕಾದ ಅಂಶ. ಟ್ರಾನ್ಸ್‌ಪೋರ್ಟ್ ಕಮಿಷನರ appointment ಆದಮೇಲೆ ಅವರು ತಕ್ಕ ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆಂದು ಭರವಸೆಯಿಟ್ಟುಕೊಳ್ಳಬಹುದು.

2-30 P.M.

ಶ್ರೀ ಬಿ. ಬನಪ್ಪ (ಹೊನಬುಗರ್).—ಈಗ ಇಂಟರ್ ಸ್ಟೇಟ್ ಟೋಲ್ ಗೇಟುಗಳ ಬಳಿ ಹೊರಗಡೆಯಿಂದ ಸಾಮಾನುಗಳನ್ನು ಸಾಗಿಸಿಕೊಂಡು ಬರತಕ್ಕ ವೆಹಿಕಲ್ಸ್‌ನವರಿಗೆ ಪರ್ಮಿಟ್‌ಗಳು ಸಿಕ್ಕಬೇಕಾಗಿದ್ದರೆ ಅವರು ಬಿಲ್ಲಾ ಕಸಬಗಳಿಗೆ ಬಂದು ಅಲ್ಲಿ 2-3 ದಿವಸ ಕಾದು ಕುಳಿತಿರಬೇಕಾಗಿದೆ. ಅಲ್ಲಯವರೆಗೂ ಆ ಭರ್ತಿ ಇರುವ ಲಾರಿಗಳು ಆ ಟೋಲ್ ಗೇಟ್ ಬಳಿಯೇ ಇರಬೇಕಾಗುತ್ತದೆ. ಆದ್ದರಿಂದ ಬಹಳ ತೊಂದರೆಯಾಗುತ್ತಿದೆ. ಆದುದರಿಂದ ಈ ಪರ್ಮಿಟ್ಟುಗಳನ್ನು ಜಾಗ್ರತೆಯಾಗಿ ಅವರಿಗೆ ದೊರೆಯುವಂತೆ ಒಂದು ನುವ್ಯವಸ್ಥಿತವಾದ ಏರ್ಪಾಡನ್ನು ಮಾಡುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಆ ರೀತಿ ಈಗ ಬಸ್ ಮತ್ತು ಲಾರಿಗಳವರಿಗೆ ತೊಂದರೆಯಾಗುತ್ತಿದೆಯೆಂಬ ಅಂಶ ಸರ್ಕಾರದವರ ಗಮನಕ್ಕೂ ಬಂದಿದೆ. ಆದಷ್ಟು ಜಾಗ್ರತೆ ಇದನ್ನು ತಪ್ಪಿಸುವುದಕ್ಕೆ ಒಂದು ಸೂಕ್ತ ರೀತಿಯಲ್ಲಿ ಕಾರ್ಯಕ್ರಮವನ್ನು ಕೈಗೊಳ್ಳಬೇಕೆಂಬ ಮನಸ್ಸುಳ್ಳವನಾಗಿದ್ದೇನೆ.

ಇನ್ನು ಶ್ರೀ ಜಿ. ದುಗ್ಗಪ್ಪನವರು ರಿಕ್ಷಾಗಳಲ್ಲಿ ಮತ್ತು ಟ್ಯಾಕ್ಸಿಗಳಲ್ಲಿ ಮೀಟರುಗಳನ್ನು ಸರಿಯಾದ ರೀತಿಯಲ್ಲಿ ಫಿಕ್ಸ್ ಮಾಡಿಸಿ ಸರ್ಕಾರದವರು ಸೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂಬುದಾಗಿ ತಿಳಿಸಿದ್ದಾರೆ, ಅದನ್ನು ಮಾಡಲಾಗುತ್ತದೆ. ಮತ್ತು ಈ ಪರ್ಮಿಟ್‌ಗಳ ವಿಚಾರವನ್ನೂ ಪ್ರಸ್ತಾಪಿಸಿದ್ದಾರೆ. ಈ ಪರ್ಮಿಟ್ಟುಗಳು ಏತಕ್ಕಾಗಿ ಹಾಗೆ ಇನ್ನೊಬ್ಬರ ಹೆಸರಿನಲ್ಲಿ ಇರುತ್ತವೆ ಎಂದರೆ, ಈಗ ಯಾವನಾದರೂ ಒಬ್ಬ ಮನುಷ್ಯನು ಇನ್ನೊಬ್ಬನ ಹತ್ತಿರ ಒಂದು ವೆಹಿಕಲ್ಲನ್ನು ಕೊಂಡು ಕೊಂಡರೆ ಅದರ ಪೂರ್ತಿ ಹಣವನ್ನು ಆಗಲೇ ಪಾವತಿ ಮಾಡಿಬಿಡಬೇಕು. ಹಾಗೆ ಪಾವತಿ ಮಾಡದೆ ಆ ವೆಹಿಕಲ್ಲನ್ನು ಕೊಂಡುಕೊಂಡರೆ, ಅದರ ಹಣ ಪೂರ್ತಿಯಾಗಿ ಮಾಲೀಕನಿಗೆ ಸಂದಾಯವಾಗುವ ವರೆಗೂ ಆ ವೆಹಿಕಲ್ ಮಾರಾಟವಾಗಿದ್ದರೂ ಕೂಡ ಆ ಮೊದಲನೆಯ ಓನರ್ ಹೆಸರಿನಲ್ಲೇ ಇರುತ್ತದೆ. ರನ್ ಮಾಡತಕ್ಕವರು ಹೈರ್ ಪರ್ಚೇಸ್ ಸಿಸ್ಟಂ ಪ್ರಕಾರ ಕೊಂಡುಕೊಂಡು ರನ್ ಮಾಡುತ್ತಿರುವುದರಿಂದ ಗಾಡಿ ಒಬ್ಬರ ಹೆಸರಿನಲ್ಲಿದ್ದರೆ ಅದನ್ನು ರನ್ ಮಾಡತಕ್ಕವರೇ ಬೇರೆ ಆಗಿರುತ್ತಾರೆ. ಇದನ್ನೂ ಕೂಡ ಜಾಗ್ರತೆಯಾಗಿ ಒಂದು ವ್ಯವಸ್ಥೆಗೆ ತಂದು ನರಿಯಾಗಿ ನೋಡಿಕೊಳ್ಳಲು ಪ್ರಯತ್ನ ಮಾಡುತ್ತೇವೆ.

ಇನ್ನು ಈ ಬಸ್ ಆಕ್ಸಿಡೆಂಟುಗಳ ವಿಚಾರವಾಗಿ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಆದರೆ ಈ ವಿಚಾರದಲ್ಲಿ ನಮ್ಮ ಸಂಸ್ಥಾನದಲ್ಲಿ ಆಗಿರುವ ಆಕ್ಸಿಡೆಂಟ್‌ಗಳ ಸಂಖ್ಯೆಯನ್ನು ಇತರ ಸ್ಟೇಟುಗಳ ಆಕ್ಸಿಡೆಂಟ್

ಸಂಖ್ಯೆಗಳಿಗೆ ಹೋಲಿಸಿ ನೋಡಿದರೆ ನಮ್ಮ ಸಂಸ್ಥಾನದಲ್ಲಿ ಈ ಆಕ್ಸಿಡೆಂಟ್‌ಗಳಾಗುತ್ತಿರುವುದು ಬಹಳ ಕಡಮೆಯೆಂಬುದು ಗೊತ್ತಾಗುತ್ತದೆ. Accidents do happen in life. ಆದರೆ ಬ್ರಹ್ಮ ನಮ್ಮ ಹಣೆಯಲ್ಲಿ ಹೀಗೆಯೇ ಸಾಯಬೇಕು ಎಂದು ಬರೆದಿದ್ದರೇನೇ ಹಾಗೆ ಸಾಯುತ್ತಾರೆ. ಎಡವಿಬಿದ್ದು ಎಷ್ಟು ಜನರು ಹೋಗಿಲ್ಲ? ಈ ಆಕ್ಸಿಡೆಂಟ್‌ಗಳನ್ನು ಅದಷ್ಟು ತಡೆಗಟ್ಟಲಾಗುತ್ತಿದೆ.

ಶ್ರೀ ಪಿ. ಆರ್. ರಾಮಯ್ಯ (ಬನವನಗುಡಿ).—ಈಗ ಈ ಮಿಲಿಟರಿ learnersಗಳು ಸಿಟಿ ಏರಿಯಾದಲ್ಲಿ ಆ ಲಾರಿಗಳನ್ನು ತರುತ್ತಿರುವುದರಿಂದ ಬಹಳ ತೊಂದರೆಯಾಗುತ್ತಿದೆ. ಅದನ್ನು ತಪ್ಪಿಸುವುದಕ್ಕೆ ತಾವೇನು ಪ್ರಯತ್ನ ಮಾಡಿದ್ದೀರಿ?

ಶ್ರೀ ಎಚ್. ಸಿದ್ದವೀರಪ್ಪ.—ಈ ವಿಚಾರದಲ್ಲಿ ನಾನು ಆ ಮಿಲಿಟರಿ ಆಫೀಸರಿಗೆ ಬರೆದು ತಿಳಿಸುತ್ತೇನೆ. ಆದರೆ ಹಾಗೆ ಜನಸಂದಣಿಯಿರತಕ್ಕಂಥ ಪ್ರದೇಶದಲ್ಲಿ ಆ ಲಾರಿಗಳನ್ನು ನಡೆಸತಕ್ಕದ್ದು ಕೂಡ ಒಂದು ಬಗೆಯ ಟ್ರೈನಿಂಗೇ ಆಗುತ್ತದೆ,

ಹೀಗೇ ಇನ್ನೂ ಏನೇನು ನ್ಯೂನತೆಗಳಿರುತ್ತವೆಯೋ ಅವುಗಳನ್ನೆಲ್ಲಾ ಅತಿ ಶೀಘ್ರವಾಗಿ ಸರಿಪಡಿಸಲಾಗುತ್ತದೆ. ಆದುದರಿಂದ ಮಾನ್ಯ ಸದಸ್ಯರು ಈ ಡಿಮ್ಯಾಂಡಿಗೆ ತಮ್ಮ ಒಪ್ಪಿಗೆಯನ್ನು ಕೊಡಬೇಕೆಂದು ನಾನು ಪ್ರಾರ್ಥಿಸಿಕೊಳ್ಳುತ್ತೇನೆ.

ಶ್ರೀ ಡಿ. ಆರ್. ಕರಿಗೌಡ.—ಈ ಟ್ರಾನ್ಸ್‌ಪೋರ್ಟ್ ಇಲಾಖೆಯಲ್ಲಿರತಕ್ಕವರಿಗೆ ಸಂಬಳ, ಪ್ರಾವಿಡೆಂಟ್ ಫಂಡ್, ಗ್ರಾಚ್ಯುಯಿಟಿ ಇತ್ಯಾದಿಗಳನ್ನು ಕೊಡುವುದಕ್ಕಾಗಿ ತಾವೇನು ಏರ್ಪಾಡು ಮಾಡಿದ್ದೀರಿ?

ಶ್ರೀ ಎಚ್. ಸಿದ್ದವೀರಪ್ಪ.—ಈ ಇಲಾಖೆ ಇಲ್ಲಿಯವರೆಗೂ ಇನ್ನೂ ಹಂಗಾಮಿಯಾಗಿಯೇ ಇತ್ತು. ಇನ್ನು ಮುಂದಕ್ಕೆ ಈ ಇಲಾಖೆ ಖಾಯಂ ಆದನಂತರ ಅವುಗಳನ್ನೆಲ್ಲಾ ಏರ್ಪಾಡು ಮಾಡಲಾಗುತ್ತಿದೆ.

Mr. SPEAKER.—The question is :

"That a sum not exceeding Rs. 3,13,500 be granted to the Government to defray the charges which will come in course of payment during the year ending 31st day of March 1956, in respect of 'Charges on account of Motor Vehicles Acts'."

The motion was adopted.

DEMAND No. 18—EDUCATION.

No. 37—EDUCATION.

Mr. SPEAKER.—Motion moved :

"That a sum not exceeding Rs. 4,46,48,000 be granted to the Government to defray the charges which will come in course of payment during the year ending 31st day of March 1956, in respect of 'Education'."

I have received information that the following cut motions may be taken up:

Nos. 13, 16, 20, 26, 27, 32, 33, 46. 57, 67, 68, 69, 70, 73, 77, 78, 88, 102, 103, 105, 110, 115, 124, 127, 128, 130, 132, 133, 134 and 135.

University Administration (need to grant autonomy).

* Sri S. SRINIVASA IYENGAR (T.-Narsipur).—I rise to place before this House my observations on the subject of granting autonomy to the University of Mysore. Even though the University of Mysore was established in the year 1916, the University has neither the academic freedom nor the financial freedom. It has never known administrative freedom. I think eminent educationists are of the opinion that autonomy should be granted to the Universities. Matters of academic nature, even such matters are being subjected to the approval or orders of Government. The Educational Reforms Committee have also observed the same point. They have said in page 197 as follows: "As things stand now, even academic Ordinances have to be submitted to Government for approval." Thus even in academic matters, the University is now in the position of a Government department. Dr. C. R. Reddy has also expressed his views about this problem. Dr. C. R. Reddy has said in his 'Report on Education in Mysore State' as follows : He puts a question.

> "If the Secretariat should administer the University, then why have a University? Have another D. P. I. or some one analogous. To constitute a University and deprive it of the right to lead a constitutional life through the exercise of the secular and financial powers of Government is self-contradiction which leads to self-stultification all round."

This is what Dr. Reddy also says. Therefore, the University must have the academic freedom. As it stands to-day, even the determination of the hours of lecturing by a Lecturer or an Assistant Professor goes to Government

(SRI S. SRINIVASA IYENGAR.)

for sanction, or the modification of any syllabus or change of subjects or course of study goes to Government for sanction. I think no University can prosper if it has to depend on Government.

As regards the financial freedom that I spoke of, I submit that we should give the University a bloc grant. As it is, even though we are voting Rs. 43 lakhs to the University, that grant is a lapsable grant. It is not handed over to the University as a fund and the Government should hand it over to the University. There may be an argument that this House must have control or the Government must have control over the University. The Reforms Committee have already said that when the grant is placed before the Legislature, the Legislature has overall control over the Demand. Therefore, we will have every opportunity to discuss any shortcomings of the administration of the University while voting for the grants of the University. In other parts of India also a bloc grant is handed over. In foreign countries, in America, for instance, there are two types of Universities—the private Universities and the State-financed Universities. Even there the grant is handed over to the Universities as a bloc grant and the Government will have nothing to do with it. If the University were to approach the Government for sanction for everything, then we would not to permitting the University to develop.

The last thing is about the administrative system. In matters of recruitment and promotion, the policies of Government are forced on the University. Many educationists have said that the standards are deteriorating because of the policy of recruitment. Dr. Reddy said that loss of control over its appointment of Professors has contributed largely to the deterioration of the standards of the University. I can understand the following of certain principles at the time of recruitment, but I cannot understand the application of those principles at the time of promotions. We have discussed actions of the University Council many a time on the floor of the House and I have brought to the notice of Government that even a resolution sent by the University Council about three years back has not yet been finalised. The Government promised more than once that they would consider the resolution of the University Council in respect of creating supernumerary Assistant Professors and the resolution is still not approved by the Government. In administrative matters, the University must have some independent power. The Government cannot have that power with them and still expect the University to run on efficient lines and I consider that these things should be taken into account while we consider the University Bill. While recommending autonomy to the University, I feel that certain rules have to be laid down for the observance of the University. The University Council is the sovereign body and the University Council has to adopt certain rules framed by this House. The Legislature will have the power of framing the rules. The University Council should follow those rules. Any order of the University Council must be subject to appeal and there is no question of appeal coming to the Government. The Government consider it according to certain information they are in possession of and many a time it will not amount to giving justice to the aggrieved.

At present, because the University serves as a department of the Government, the teachers do not enjoy independence of thought or they cannot express independent views. One of the Professors of the Mysore University resigned on account of the difference of opinion between himself and the Government - Dr. Srikantaiya. The teachers, especially in political science, must have some independence. As it stands, they cannot express opinion independent of the Government because the University is part of the Government and it is probable that their explanation may be called for by the Government. Since the Government is being run on a party basis, it is very necessary that we should have independence of teaching staff. There will be

initiative. They will think about these problems, they will give expression to their opinions about these problems in the course of teaching and also write articles publicly. But they should not do it with the fear that they may at any moment be called upon to explain their actions. They can do anything. They must do it because they have greater time to think about it.

Sir, the other thing I wanted to place before the House is this. Many men have been deputed to foreign countries by the State. They have returned with very good knowledge. But what is the opportunity that has been offered by the University for them to make use of the knowledge that they have gained in other countries? They go; after spending a year and specialising in a subject or subjects they return to the University just to occupy the same old places of lecturership. Provision for research is thoroughly inadequate in the University of Mysore. It is true that the Mysore University is a teaching University. In some places, the Universities are merely examining universities. Here, it is both a teaching university and an examining university as well. I consider that research must play an important role in the University. Those that are returned from foreign countries have not been enabled to use their knowledge in research and for the good of the country. A deviation in procedure is very necessary.

The University, as it stands to-day, is spending nearly 69 lakhs and the Government grants total only to 43 lakhs. They have got some other sources of revenue too. Why not we allow the University to exist as an autonomous institution and contribute largely to the good of the common man? Almost every lecturer has become a political propagandist. Many lecturers are backed by important men. They are devoting greater attention to follow the matters pertaining to the University Council rather than devote their attention to teaching. Therefore, I want autonomy. I want certain rules to be framed by this House to be followed by the University Council. The question of the University. . . .

Sri B. NARAYANASWAMY (Mysore City—South).—Still my friend wants autonomy.

Sri S. SRINIVASA IYENGAR.—Yes. If the University Council follows particular rules fixed by this House, no question of canvassing would be necessary on the part of the lecturer. Just because, there are no rules, they want to put pressure at the Council stage, at the Government Stage and at the University Stage. Therefore, there is a lot of indiscipline not only on the part of the students but on the part of the teaching staff also. Therefore, we have to regularise. These are facts we see today. It is up to you to see how best it can be avoided. There is no personal vendetta. This is a thing that I have observed and I place it before you for such action as is necessary. I recommend to Government that they should introduce the University Bill immediately and bring it on the statute book.

First Grade College to Chitaldrug.

*ಶ್ರೀ ಜಿ. ಶಿವಪ್ಪ (ಹೊಳಲಕೆರೆ).—ಸ್ವಾಮಿ, ಚಿತ್ರದುರ್ಗಕ್ಕೆ ಒಂದು ಫಸ್ಟ್ ಗ್ರೇಡ್ ಕಾಲೇಜನ್ನು ಕೊಡಬೇಕೆಂದು ಒತ್ತಾಯಪಡಿಸಲು ನನ್ನ ಜೋತಾ ಸೂಚನೆಯನ್ನು ಕಳುಹಿಸಿದ್ದೇನೆ. ಅಲ್ಲಿ ಈಗ ಇರತಕ್ಕ ಇಂಟರ್ ಮೀಡಿಯೆಟ್ ಕಾಲೇಜನ್ನು ಫಸ್ಟ್‌ಗ್ರೇಡ್ ಕಾಲೇಜಾಗಿ ಮಾಡಬೇಕೆಂದು ಬಹಳ ದಿವಸಗಳಿಂದ ಕೇಳುತ್ತಿದ್ದೇವೆ. ಈಗ ಇದಕ್ಕೆ ಏನು ಅನುಕೂಲಗಳು ಬೇಕೋ ಅವನ್ನು ಕಲ್ಪಿಸಲಾಗಿದೆ. ಮಾನ್ಯ ಮಂತ್ರಿಗಳು ಬಂದಾಗ ಸ್ಥಳವನ್ನು ಪರಿಶೀಲನೆ ಮಾಡಿದ್ದಾರೆ. ಕಟ್ಟಡ ಸಂಪೂರ್ಣವಾಗಿ ಮುಗಿದಿದೆ. ಅಲ್ಲದೆ ವಿಶ್ವವಿದ್ಯಾನಿಲಯದ ಕಮಿಷನವರು ಕೂಡ ಒಂದುಸಾರಿ ಬಂದು ಪರಿಶೀಲನೆಮಾಡಿ ಆ ಸ್ಥಳ ಚೆನ್ನಾಗಿದೆಯೆಂದು ಅಭಿಪ್ರಾಯಪಟ್ಟಿದ್ದಾರೆ. ಅಂಕಿ ಅಂಶಗಳನ್ನು ಪರಿಶೀಲನೆ ಮಾಡಿ, ಆ ಜಿಲ್ಲೆಯಲ್ಲಿ ಎರಡು ಇಂಟರ್ ಕಾಲೇಜುಗಳಿವೆ, ಚಿತ್ರದುರ್ಗದಲ್ಲೊಂದು, ದಾವಣಗೆರೆಯಲ್ಲೊಂದು, ಬೇರೆ ಯಾವ ಜಿಲ್ಲೆಯಲ್ಲಿಯೂ ಎರಡು ಇಂಟರ್ ಕಾಲೇಜಿಲ್ಲ, ಆದಕಾರಣ ಅಲ್ಲಿಗೆ ಫಸ್ಟ್‌ಗ್ರೇಡ್ ಕಾಲೇಜನ್ನು ಕೊಡುವುದು ಅತ್ಯಾವಶ್ಯಕವೆಂದು ಹೇಳಿ ಶಿಫಾರಸು ಕೂಡ ಮಾಡಿದ್ದಾರೆಂದು ತಿಳಿದುಕೊಂಡಿದ್ದೇನೆ. ಅಲ್ಲಿನ ಧರ್ಮಾತ್ಮರು ಒಂದು ಒಂದೂವರೆ ಲಕ್ಷ ರೂಪಾಯಿಗಳನ್ನು ಕೇಭರಣಮಾಡಿ ಕಟ್ಟಡಗಳನ್ನು ಮುಗಿಸಿದ್ದಾರೆ. ಅಲ್ಲಿ ನುಮಾರು 20 ಹಾಸ್ಟೆಲುಗಳಿವೆ. ಕೋಮುವಾರು ಹಾಸ್ಟೆಲುಗಳಲ್ಲಿ ಇನ್ನೊಂದು ಸತ್ಸಂಪ್ರದಾಯವನ್ನನುಸರಿಸಿದ್ದಾರೆ, ಅದೇನೆಂದರೆ, ಇತರ ಕೋಮುಗಳವರನ್ನೂ ಸೇರಿಸಿದ್ದಾರೆ. ಇದನ್ನು ಸರ್ಕಾರದವರು ಗಮನಿಸಬೇಕು. ಈ ಎಲ್ಲ ಕಾರಣಗಳಿಂದ ಅಲ್ಲಿಗೆ ಫಸ್ಟ್ ಗ್ರೇಡು ಕಾಲೇಜನ್ನು ಕೊಡಬೇಕೆಂದು ಸರ್ಕಾರವನ್ನು ಪ್ರಾರ್ಥಿಸುತ್ತೇನೆ.

(ಶ್ರೀ ಜಿ. ಶಿವಪ್ಪ)

ಇನ್ನೊಂದು ವಿಷಯ. ವಿದ್ಯಾನುಧಾರಣ್ ಜಾರಿಗೆ ಬಂದಮೇಲೆ ಜಿಲ್ಲೆಗಳಲ್ಲಿರುವ ಇಂಟರ್ ಮೀಡಿಯೆಟ್ ಕಾಲೇಜುಗಳ ಭವಿಷ್ಯ ಯಾವರೀತಿ ಆಗುತ್ತದೆಯೆಂಬುದನ್ನು ಹೇಳುವುದು ಕಷ್ಟವಾಗುತ್ತದೆ. ಏಕೆಂದರೆ, ವಿಶ್ವವಿದ್ಯಾನಿಲಯದ ವಿದ್ಯಾಭ್ಯಾಸ ಮೂರು ವರ್ಷವಾಗಿರುವುದರಿಂದ ಒಂದು ವರ್ಷದ ಇಂಟರ್‌ಮೀಡಿಯೆಟ್ ತರಗತಿ ಸೀನಿಯರ್ ಸೆಕೆಂಡರಿ ಹೈ ಸ್ಕೂಲು ಆಗಬೇಕಾಗಿದೆ. ಇಲ್ಲದಿದ್ದರೆ ಅವೆಲ್ಲವೂ ಫಸ್ಟ್ ಗ್ರೇಡ್ ಕಾಲೇಜುಗಳಾಗಬೇಕು ಈ ಪ್ರಶ್ನೆಯನ್ನು ಬಗೆಹರಿಸಿ, ಉದಾರಮನಸ್ಸುಮಾಡಿ ಪ್ರಮುಖವಾದ ಜಿಲ್ಲೆಗಳಲ್ಲಾದರೂ ಇಂಟರ್‌ಮೀಡಿಯೆಟ್ ಕಾಲೇಜುಗಳನ್ನು ಫಸ್ಟ್‌ಗ್ರೇಡ್ ಕಾಲೇಜುಗಳಾಗಿ ಪರಿವರ್ತನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ನಾನು ಹೇಳಿರುವ ಅಭಿಪ್ರಾಯ ಸೂಕ್ತವೆಂದು ಮಾನ್ಯ ಸದಸ್ಯರು ಭಾವಿಸುತ್ತಾರೆಂದು ನಂಬಿದ್ದೇನೆ. ಈ ಕಾರಣಗಳಿಂದ ಚಿತ್ರದುರ್ಗಕ್ಕೆ ಒಂದು ಫಸ್ಟ್‌ಗ್ರೇಡ್ ಕಾಲೇಜನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

Primary School Teachers' Pay (need to raise the scales).

*ಶ್ರೀ ಜಿ. ಪುಟ್ಟಸ್ವಾಮಿ (ಚಿಕ್ಕಮಗಳೂರು-ಮೂಡಿಗೆರೆ—ಅನುಸೂಚಿತ ಜಾತಿಗಳು).—ಸ್ವಾಮಿ, ನಂಸ್ಥಾನದಲ್ಲಿರುವ ಪ್ರೈಮರಿ ಸ್ಕೂಲುಗಳ ಉಪಾಧ್ಯಾಯರ ನಂಬಳದ ಸ್ಕೇಲುಗಳನ್ನು ಹೆಚ್ಚಿಸಬೇಕೆಂದು ನಾನು ಜೋತಾ ನಿರ್ಣಯವನ್ನು ಮಂಡಿಸಿದ್ದೇನೆ. ನಂಸ್ಥಾನದಲ್ಲಿ ಈಗ ಪ್ರೈಮರಿ ಶಾಲೆಗಳಲ್ಲಿ ಹದಿಮೂರು, ಹದಿನಾಲ್ಕು ಸಾವಿರ ಜನ ಉಪಾಧ್ಯಾಯರಿದ್ದಾರೆ. ಕೇವಲ 25 ರೂಪಾಯಿ ನಂಬಳದ ಮೇಲೆ ಕೆಲಸಮಾಡುತ್ತಿದ್ದಾರೆ. ಇದರಲ್ಲಿ ಅವರ ಮಕ್ಕಳಿಗೆ ವಿದ್ಯಾಭ್ಯಾಸಮಾಡಿಸಬೇಕು ; ಅವರಿಗೆ ಬೇಕಾದ ಎಲ್ಲ ಸೌಕರ್ಯಗಳನ್ನೂ ಈ ಅಲ್ಪ ನಂಬಳದಿಂದ ಒದಗಿಸಿಕೊಳ್ಳುವುದು ಸಾಧ್ಯವಿಲ್ಲ. ಇವೊತ್ತಿನ ದಿವಸ ನಾವು ನಮ್ಮ ದೇಶದ ಬಡ್ಡೆಟ್ಟನ್ನು ತಯಾರುಮಾಡಬೇಕಾದರೆ ಬಹಳ ಕಷ್ಟವಾಗಿರುವಾಗ ಕೇವಲ 25 ರೂಪಾಯಿನಲ್ಲಿ ನಂಸಾರವನ್ನು ಒಂದು ತಿಂಗಳು ನಡೆಸಬೇಕಾದರೆ ಯಾವರೀತಿ ಅವರು ತಮ್ಮ ಬಡ್ಡೆಟ್ಟನ್ನು ತಯಾರಿಸಬೇಕಾದ ವಿಚಾರ. ಅವರಲ್ಲಿ ಈಗಿನ ಕಷ್ಟಪರಿಸ್ಥಿತಿಯ ದೆಸೆಯಿಂದ ಅನೇಕ ಹೊಸ ಹೊಸ ಸಮಸ್ಯೆಗಳು ಉದ್ಭವಿಸುತ್ತಿವೆ. ಯಾವ ರೀತಿಯಲ್ಲಿ ನೋಡಿದರೂ ಮೊದಲನಿಂದಲೂ, ಯಾವ ಕಾರಣದಿಂದರೋ ಸರ್ಕಾರದವರು ಅಷ್ಟಾಗಿ ಇವರ ವಿಚಾರದಲ್ಲಿ ಸಹಾನುಭೂತಿಯಿಂದ ಇವರ ನಂಬಳವನ್ನು ಹೆಚ್ಚಿಸುವುದಕ್ಕೆ ಗಮನಕೊಟ್ಟಿಲ್ಲವೆಂದು ಹೇಳಿದರೆ ತಪ್ಪಾಗಲಾರದು. ಇವರು ದೇಶದ ಭಾವಿ ಪ್ರಜೆಗಳನ್ನು ತಯಾರು ಮಾಡುವವರು, ರಾಷ್ಟ್ರ ನಿರ್ಮಾಣಕರನ್ನು ತಯಾರುಮಾಡುವವರು. ಇಂಥವರು ಎಷ್ಟುಮಟ್ಟಿಗೆ ಶ್ರದ್ಧೆಯಿಂದ ಸೇವೆಯನ್ನು ಸಲ್ಲಿಸಬೇಕೋ ಅಷ್ಟುಮಟ್ಟಿಗೆ ಸಲ್ಲಿಸದಿದ್ದರೆ, ಅಥವಾ ಅವರ ಕರ್ತವ್ಯ ನಿರ್ವಹಣೆಯನ್ನು ಸರಿಯಾಗಿ ಮಾಡದಿದ್ದರೆ ದೇಶಕ್ಕೆ ಎಷ್ಟು ತೊಂದರೆ, ಎಷ್ಟು ಅನಾಹುತವಾಗುತ್ತದೆ ಎಂಬುದನ್ನು ಸರ್ಕಾರದವರು ಸರಿಯಾದ ರೀತಿಯಲ್ಲಿ ಯೋಚನೆಮಾಡಿ, ಏರ್ಪಾಡುಮಾಡಬೇಕು. ಇಲ್ಲದಿದ್ದರೆ ತೊಂದರೆಯಾಗುತ್ತದೆ. ಈಗ ನಂಸ್ಥಾನದಲ್ಲಿ, ಅದರಲ್ಲಿಯೂ ಮಲೆನಾಡಿನಲ್ಲಿ, ಉಪಾಧ್ಯಾಯರು ಬಹಳ ತೊಂದರೆಯಲ್ಲಿದ್ದಾರೆ. ಕನಿಷ್ಠಪಕ್ಷ ಸದ್ಯದಲ್ಲಿ ಮಲೆನಾಡು ಅಲೋಯನ್ಸ್ ಐದು ರೂಪಾಯಿ ಹೆಚ್ಚುಮಾಡಬೇಕು. ನಂಸ್ಥಾನದಲ್ಲಿರುವ ಉಪಾಧ್ಯಾಯರುಗಳಿಗೆ ಕೊನೆಯಪಕ್ಷ ತಿಂಗಳಿಗೆ ಐದು ರೂಪಾಯಿ ನಂಬಳ ಹೆಚ್ಚಿಸಿದರೂ ಈ ಕಾಲಕ್ಕನುಗುಣವಾಗಿರುತ್ತದೆ. ಸರ್ಕಾರದವರು ಈ ವಿಚಾರವನ್ನು ಸಹಾನುಭೂತಿಯಿಂದ ಏಮರ್ಶೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಚಿಕ್ಕಮಗಳೂರು, ಮೂಡಿಗೆರೆಯಲ್ಲಿ ನಿಮ್ನತರಗತಿಯವರಿಗೆ ಉಚಿತ ಬೋರ್ಡಿಂಗ್ ಹೋಮ್ ಮಾಡಬೇಕೆಂದು ಕೇಳಿದ್ದೇನೆ.

Mr. SPEAKER.—Hon'ble Member has to speak only on cut motion No. 20.

Sri G. PUTTASWAMY.—I will speak on two cut motions.

Mr. SPEAKER.—Then there will be no time for other Hon'ble Members. Sri Madiah may speak on cut motion No. 26.

Scholarships to Depressed Class Students.

*ಶ್ರೀ ಎಂ. ಮಾದಯ್ಯ (ನಂಜನಗೂಡು—ಅನುಸೂಚಿತ ಜಾತಿಗಳು).—ಸ್ವಾಮಿ, ಹಿಂದುಳಿದ ಪಂಗದಗಳ ವಿದ್ಯಾಭ್ಯಾಸದ ವಿಚಾರದಲ್ಲಿ ಕೆಲವು ವಿಷಯಗಳನ್ನು ಆಗಾಗ ಅನೇಕಸಾರಿ ಸರ್ಕಾರದ ಗಮನಕ್ಕೆ ತರುತ್ತಿದ್ದೇವೆ. ಪ್ರಾಯಶಃ ಬಡ್ಜೆಟ್ ತಯಾರು ಮಾಡುವಾಗ ಅವರ ಗಮನಕ್ಕೆ ಯಾರಾದರೂ ತಂದಿದ್ದರೆ ಅಥವಾ ಅವರೇ ಜ್ಞಾಪಿಸಿಕೊಂಡಿದ್ದರೆ ಅವರು ಈ ವಿಷಯವನ್ನು ಮರೆಯುತ್ತಿರಲಿಲ್ಲವೋ ಏನೋ ಎಂದು ನನಗೆ ಅನ್ನಿಸುತ್ತದೆ. ಹಿಂದುಳಿದವರೂ ನಿಮ್ನವರ್ಗದವರೂ ವಿದ್ಯಾಭ್ಯಾಸದಲ್ಲಿ ಬಹಳ ಹಿಂದುಳಿದಿದ್ದಾರೆ, ಇವರಿಗೆ ಪ್ರೋತ್ಸಾಹ ಕಡಮೆ ಎಂದು ಸುಮಾರು ಒಂದು ಕೋಟಿ ರೂಪಾಯಿ ಖರ್ಚುಮಾಡಿ ಹಾಸ್ಟಲುಗಳನ್ನು ಕಟ್ಟಿಸುತ್ತೇವೆಂದು ಹೇಳಿ ಮುಂದಿನ ಸಾಲನಲ್ಲಿ ಇದಕ್ಕಾಗಿ ಐದು ಲಕ್ಷ ರೂಪಾಯಿ ಒದಗಿಸಿದ್ದಾರೆ. ಹೀಗೆ ಮಾಡಿದರೂ, ಬಡವರಿಗೆ ಅಲ್ಲಿ ಸೇರಿ ವಿದ್ಯಾಭ್ಯಾಸಮಾಡಲು ಸಾಧ್ಯವಿಲ್ಲದೇ ಹೋದರೆ, ಈ ಅನುಕೂಲವೂ ಅನುಕೂಲಸ್ಥರಿಗೇ ಹೋಗಬೇಕಾಗುತ್ತದೆ. ಬಡವರಿಗೆ ಹೆಚ್ಚು ವೇತನಗಳನ್ನು ಕೊಡದೇ ಹೋದರೆ ಅಲ್ಲಿ ಹೋಗಿ ಅವರು ವಿದ್ಯಾಭ್ಯಾಸ ಮಾಡುವುದಕ್ಕಾಗುವುದಿಲ್ಲ. ಹಿಂದುಳಿದ ಪಂಗದದ ವಿದ್ಯಾರ್ಥಿಗಳ ಕಷ್ಟಗಳ ವಿಚಾರವನ್ನು ಅನೇಕಸಾರಿ ಸರ್ಕಾರದ ಗಮನಕ್ಕೆ ತಂದಿದ್ದರೂ ಅವರು ಅಷ್ಟಾಗಿ ಮನಸ್ಸಿಗೆ ತೆಗೆದುಕೊಂಡಿಲ್ಲ. ಯಾವ ಕೋಮಿನವರೇ ಆಗಲಿ, ಬಡವರಿಗೆ ಎಲ್ಲಾ ಕೋಮಿನಲ್ಲಿಯೂ ಅವಕಾಶವಿರುವುದಿಲ್ಲ. Percentage of literacy ತೆಗೆದುಕೊಳ್ಳಲಿ, ಸರ್ಕಾರದಿಂದ ಸಹಾಯ ಪಡೆಯುತ್ತಿರುವ ಸಂಸ್ಥೆಗಳು, ಅನಾಥಾಲಯಗಳು, ಯಾವುದನ್ನು ತೆಗೆದುಕೊಂಡು ನೋಡಿದರೂ the haves will have and the have-nots will never have. Haves will always go higher and the have-nots will never come up higher. ಪ್ರತಿವರ್ಷವೂ ನಡೆಯುತ್ತಿದೆ. ಕೋಮು ಎನ್ನುವ ಹೆಸರನ್ನು ತೆಗೆದು a group of human beings who have not got any facilities ಈ ಗುಂಪನ್ನು ತೆಗೆದುಕೊಂಡರೆ, among this class

as compared with others the percentage of literacy is lower and their progress is hampered. They will not be progressing regularly. ಆದುದರಿಂದ ಸರ್ಕಾರದವರು ಇದನ್ನು ಯೋಚನೆಮಾಡಿ, ಈ ಬಡ್ಜೆಟ್ಟನ್ನು ಒಪ್ಪಿದ್ದರೂ ಕೂಡ, ಮಧ್ಯಕಾಲದಲ್ಲಿ ಕೆಲವು ಸಲಭ್ಗಳನ್ನೊದಗಿಸಲು supplementary or additional grants ಆದರೂ ಕೊಟ್ಟು ಸಹಾಯಮಾಡಿದ್ದರೆ ಅವರಿಗೆ ಅನ್ಯಾಯಮಾಡಿದ ಹಾಗಾಗುತ್ತದೆ. ಈ ಬಡ್ಜೆಟ್ಟಿನಲ್ಲಿ ಈ ಸಾರಿ Backward Classesಗೆ ಕೊಟ್ಟಿರುವುದು 2,24,987 ರೂಪಾಯಿ. ನಿಮ್ಮ ತರಗತಿಯವರಿಗೆ 72,400 ರೂಪಾಯಿ. ಒಂದು ಕೋಟಿ ಪ್ರಜಾನಂಖ್ಯೆಯಲ್ಲಿ 15 ಲಕ್ಷ ಪ್ರಜಾನಂಖ್ಯೆಯಿರುವವರಿಗೆ ಇಷ್ಟು! ಒಂದು ಕೋಟಿ ಜನರಲ್ಲಿ haves ಸುಮಾರು 25 ಲಕ್ಷ ಕೂಡ ಇಲ್ಲ. 85 ಲಕ್ಷ have-nots ಇದ್ದಾರೆ. ಇಷ್ಟು ಜನರಿಗೆ ಎರಡು ಲಕ್ಷ ಚಿಲ್ಲರೆ ಕೊಟ್ಟರೆ ಬಂಡಿತವಾಗಿ ಸಾಕಾಗುವುದಿಲ್ಲ. ಕೊನೆಯಪಕ್ಷ Backward Classes 5 ಲಕ್ಷ ರೂಪಾಯಿ, Depressed Classesಗೆ 2 ಲಕ್ಷ ರೂಪಾಯಿ ಆದರೂ ಇಡಬೇಕು. ಪ್ರತಿವರ್ಷವೂ ಬಡ್ಜೆಟ್ಟು ದೊಡ್ಡದಾಗುತ್ತಿದೆ. ನಾಲ್ಕು ಐದು ಕೋಟಿ ರೂಪಾಯಿ ಖರ್ಚಾಗುತ್ತಿದ್ದು ಕಳೆದ ಹತ್ತು ವರ್ಷಗಳಲ್ಲಿ ಎಷ್ಟೋ ಹೆಚ್ಚಾಗಿದೆ. ಆದರೂ have-nots ಹಿಂದೆ ಎಲ್ಲದ್ದರೋ ಅಲ್ಲಯೇ ಉಳಿದಿದ್ದಾರೆ. ದಿನದಿನಕ್ಕೆ ಅನುಕೂಲಸ್ಥರೇ ವಿದ್ಯಾವಂತರಾಗುತ್ತಾರೆ, ಅನುಕೂಲಸ್ಥರು ಆಗುತ್ತಿಲ್ಲ. ಇದನ್ನು ಸರ್ಕಾರದವರು ಏಕೆ ಪರಿಶೀಲನೆ ಮಾಡಲಿಲ್ಲವೋ ಗೊತ್ತಿಲ್ಲ. ಸರ್ಕಾರದವರು ಇದನ್ನು ಗಮನದಲ್ಲಿಟ್ಟುಕೊಂಡು ಸಾಕಾದಷ್ಟು ವೇತನಗಳನ್ನು ಮುಖ್ಯವಾಗಿ ಹೈಸ್ಕೂಲು, ಕಾಲೇಜುಗಳಲ್ಲಿ ಕೊಡಲು ಹೆಚ್ಚು ಹಣವನ್ನೊದಗಿಸಬೇಕೆಂದು ಒತ್ತಾಯಪೂರ್ವಕವಾಗಿ ಕೇಳುತ್ತೇನೆ.

ಶ್ರೀ ಬಿ. ರಾಚಯ್ಯ (ಯಳಂದೂರು—ಅನುಸೂಚಿತ ಜಾತಿಗಳು).—ಸ್ವಾಮಿ, ನಾನು 27ನೆಯ ಪೊತಾ ಸೂಚನೆಗೆ ಬದಲು 28ನೆಯದರ ಮೇಲೆ ಮಾತನಾಡುತ್ತೇನೆ.

Mr. SPEAKER.—It is the same. Why don't you speak on cut motion No. 27?

3 P.M.

Education of Backward Class Children.

*ಶ್ರೀ ಬಿ. ರಾಚಯ್ಯ.—ಸಂಸ್ಥಾನಾದ್ಯಂತ 14 ವರ್ಷ ವಯಸ್ಸಿನವರೆಗೆ ಎಲ್ಲ ಮಕ್ಕಳಿಗೂ ಉಚಿತ ವಿದ್ಯಾಭ್ಯಾಸವನ್ನೂ, ಒತ್ತಾಯ ವಿದ್ಯಾಭ್ಯಾಸವನ್ನೂ ಕೊಡಬೇಕೆಂದು ರಾಜ್ಯಾಂಗದ ವಿಧಿಯಲ್ಲಿ ಹೇಳಿದೆ. ಆದರೆ ಈ ರಾಜ್ಯಾಂಗ ಪುರುವಾಗಿ 10 ವರ್ಷದೊಳಗೆ ಎಲ್ಲಾ ಸಂಸ್ಥಾನಗಳ ಸರ್ಕಾರಗಳೂ ಎಷ್ಟರಮಟ್ಟಿಗೆ ಮುಂದುವರಿಯುತ್ತಿವೆ ಎನ್ನುವುದನ್ನು ನಾವು ನೋಡಿದರೆ ಮೈಸೂರು ಸರ್ಕಾರ ಈ ವರ್ಷ ಹೆಚ್ಚಿನ ರೀತಿಯಲ್ಲಿ ಹಣವನ್ನು ಒದಗಿಸಿ ಕೊಟ್ಟಿದ್ದಾರೆ. ಆದರೊಳಗೆ ಬಂದಂಥ ಮಕ್ಕಳಿಗೆ ಮಾತ್ರ ಉಚಿತ ವಿದ್ಯಾಭ್ಯಾಸ ಕೊಡುತ್ತಾರೆ. ಮಿಡಲ್ ಸ್ಕೂಲ್ ಮತ್ತು ಪ್ರೈಮರಿ ಸ್ಕೂಲ್‌ಗಳಲ್ಲಿ ಈಗಾಗಲೇ ಸರ್ಕಾರ ಉಚಿತ ವಿದ್ಯಾಭ್ಯಾಸ ಕೊಡುತ್ತಿದೆ. ನಾನು ಈ ಸೋತಾ ನಿರ್ಣಯವನ್ನು ತಂದಿರುವ ಉದ್ದೇಶವಿದನ್ನು ಒತ್ತಾಯವಾಗಿ ಸಂಸ್ಥಾನದಲ್ಲೆಲ್ಲಾ ಕೊಡಬೇಕೆಂಬುದು. ಉಚಿತವಾಗಿ ಕೊಡುವುದರ ಜೊತೆಗೆ ಹಿಂದುಳಿದ ಪಂಗಡದವರಿಗೆ ಮತ್ತು ವಿದ್ಯಾಭ್ಯಾಸದಲ್ಲಿ ಹೆಚ್ಚಿಗೆ ಮುಂದುವರಿಯದಂಥ ವಿದ್ಯಾರ್ಥಿಗಳಿಗೆ ಉಚಿತವಾಗಿ ವಿದ್ಯಾಭ್ಯಾಸಕೊಡುವುದರ ಜೊತೆಗೆ ಉಚಿತ ವೇತನಗಳನ್ನೂ ಮತ್ತು ಸಾಧ್ಯವಾದ ಮಟ್ಟಿಗೆ ಪಠ್ಯಪುಸ್ತಕಗಳನ್ನೂ ಸಹ ಉಚಿತವಾಗಿ ಕೊಡುವುದಕ್ಕೂ ಕೂಡ ಪ್ರಯತ್ನಪಡಬೇಕೆಂದು ಈ ಸಂದರ್ಭದಲ್ಲಿ ಸೂಚಿಸುತ್ತೇನೆ. ಈಗಾಗಲೇ ಮಾನ್ಯ ಸ್ನೇಹಿತರಾದ ಶ್ರೀ ಮಾದಯ್ಯನವರು ವಿದ್ಯಾಭ್ಯಾಸದ ವಿಷಯದಲ್ಲಿ ಮುಂದುವರಿಯದೆ ಇರತಕ್ಕಂಥ ಹಿಂದುಳಿದ ಪಂಗಡದವರಿಗೆ ದೊರೆಯತಕ್ಕಂಥ ಸರ್ಕಾರಿ ವೇತನಗಳ ವಿಷಯದಲ್ಲಿ ಹೇಳಿದ್ದಾರೆ. ಕಳೆದ ಮೂರು ವರ್ಷಗಳಿಂದಲೂ ಈ ಸರ್ಕಾರ ಒದಗಿಸುತ್ತಾ ಇರುವ ವಿದ್ಯಾವೇತನಗಳನ್ನು ನೋಡುತ್ತಿದ್ದೇನೆ. ಅವರು 70 ಸಾವಿರ ರೂಪಾಯಿಗಳನ್ನು ಕೊಡುತ್ತಾ ಬಂದಿದ್ದಾರೆ. ಪ್ರತಿ ಡಿಸ್ಟ್ರಿಕ್ಟಿನಲ್ಲೂ ಹಂಚುತ್ತಾ ಹೋದರೆ, 1,000 ಅರ್ಜಿಗಳು ಬಂದರೆ ಕೇವಲ 100 ಜನರಿಗೆ ಮಾತ್ರ ಹಂಚುವ ಪರಿಸ್ಥಿತಿ ಬಂದಿದೆ; ಹೈಸ್ಕೂಲಿನ ವಿದ್ಯಾರ್ಥಿಗೆ 7½ ರೂಪಾಯಿಯಂತೆ, ಮಿಡಲ್‌ಸ್ಕೂಲಿನ ವಿದ್ಯಾರ್ಥಿಗೆ ಮೂರು ರೂಪಾಯಿಯಂತೆ ಕೊಡುತ್ತಾರೆ. ಹೆಣ್ಣು ಮಕ್ಕಳಿಗೆ scholarship ಕೊಡುತ್ತಿರುವುದು ಕಮೆಯಾಗಿದೆ. ಕಾರ್ಪೆಜಿನಲ್ಲಿ ಓದುವ ಹಿಂದುಳಿದ ಪಂಗಡದವರಿಗೆ ಈ ಸಾರಿ ಇಂಡಿಯಾ ಸರ್ಕಾರದವರು ವಿದ್ಯಾವೇತನ ಕೊಡುತ್ತಾರೆ. ಸರ್ಕಾರದವರು ಈ ಸಂದರ್ಭದಲ್ಲಿ ಹೇಳಬಹುದು "ಸಂಸ್ಥಾನದ ಸರ್ಕಾರ ಬೇರೆಯಲ್ಲ ಮತ್ತು ಕೇಂದ್ರ ಸರ್ಕಾರ ಬೇರೆಯಲ್ಲ. ಈ ವಿಷಯದಲ್ಲಿ ಒಂದಕ್ಕೊಂದು ಸಂಬಂಧವಿರುವುದರಿಂದ ಅವರು ಕೊಟ್ಟರೂ ನಾವು ಕೊಟ್ಟಹಾಗೆ" ಎಂದು. ಈ ಸಾರಿ ಆದೇ ಉತ್ತರ ಬರುವುದಾದರೆ ಬಹಳ ನಿರಾಶೆಯಾಗುತ್ತದೆ. ಅಲ್ಲದೆ ಕಳೆದ Budget ಅಧಿವೇಶನದಲ್ಲಿ ಮಾನ್ಯ ವಿದ್ಯಾ ಸಚಿವರು ಬೇರೆ ರೀತಿಯಲ್ಲಿ ಹಿಂದುಳಿದ ಪಂಗಡದವರಿಗಾಗಿ ಏನು ಖರ್ಚು ಮಾಡುತ್ತಾರೋ ಮತ್ತು ಕಾರ್ಪೆಜಿನಲ್ಲಿ ಖರ್ಚು ಮಾಡುವುದರಲ್ಲಿ ಏನು ಉಳಿತಾಯವಾಗುತ್ತದೋ ಅದರಲ್ಲಿ ಹೈಸ್ಕೂಲ್‌ಗಳಲ್ಲಿ ಮತ್ತು ಮಿಡಲ್ ಸ್ಕೂಲುಗಳಲ್ಲಿ ಓದುವ ವಿದ್ಯಾರ್ಥಿಗಳಿಗೆ ಒದಗಿಸಲು ಪ್ರಯತ್ನ ಮಾಡುತ್ತೇವೆಂದು ಹೇಳಿದರು. ಆದರೆ ಅದನ್ನು ಇನ್ನೂ ಕಾರ್ಯಗತ ಮಾಡಿಲ್ಲ. ಹಿಂದುಳಿದ ಪಂಗಡದವರ ವಿದ್ಯಾರ್ಥಿಗಳಿಗೆ ಸರ್ಕಾರದವರು ಉಚಿತ ಹಾಸ್ಟಲನ್ನು ಏರ್ಪಡಿಸಿದ್ದಾರೆ. ಅದರಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಗೂ ಊಟ ಮತ್ತು ವಸತಿಗಾಗಿ ತಿಂಗಳಿಗೆ ಆರು ರೂಪಾಯಿ ಕೊಡುತ್ತಿದ್ದಾರೆ. ಇಂಥ ಫ್ರೀ ಬೋರ್ಡಿಂಗ್ ಹೋಂಗಳಲ್ಲಿ ವಿದ್ಯಾರ್ಥಿಗಳಿಗೆ ಊಟಕ್ಕೆ ಕಷ್ಟವಾಗಿ ಅನೇಕರು ಅದನ್ನು ಬಿಟ್ಟು ಹೋಗುವ ಪರಿಸ್ಥಿತಿ ಬಂದಿದೆ. Aided ಹಾಸ್ಟಲಿಗೆ 12 ರೂಪಾಯಿಸಂತೆ ಕೊಟ್ಟಿದ್ದಾರೆ. ಕೊನೆಯ ಪಕ್ಷ ಇನ್ನು ಆರು ರೂಪಾಯಿಗಳನ್ನಾದರೂ Original Budget ನಲ್ಲಿ ಸೇರಿಸಿ 12 ರೂಪಾಯಿ ತಿಂಗಳಿಗೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಮೈಸೂರು ಡಿಸ್ಟ್ರಿಕ್ಟಿನಲ್ಲಿರುವ Girls' Boarding Home ಕಟ್ಟಡ ಮುಸಲ್ಮಾನರ ಮಧ್ಯದಲ್ಲಿ ಸೇರಿಕೊಂಡಿದೆ. ಅದನ್ನು ಬೇರೆ ಕಡೆ ಬದಲಾಯಿಸಬೇಕೆಂದು ಈ ಸಂದರ್ಭದಲ್ಲಿ ಸೂಚಿಸುತ್ತೇನೆ. ಮಾನ್ಯ ಮಂತ್ರಿಗಳು ಸಾರ್ವಜನಿಕರ ಹಾಸ್ಟಲುಗಳನ್ನು ಕಟ್ಟಿಸುವುದಕ್ಕೋಸ್ಕರ 5 ಲಕ್ಷ ರೂಪಾಯಿ

(ಶ್ರೀ ಬಿ. ರಾಚಯ್ಯ.)

ಗಳನ್ನು ಬಡ್ಡೆಟ್ಟಿನಲ್ಲಿ ಒದಗಿಸಿರುವುದು ಬಹಳ ಶ್ಲಾಘನೀಯವಾದ ವಿಚಾರ. ಹಿಂದುಳಿದ ಪಂಗಡದವರಿಗೋಸ್ಕರ ಹೀಗೆ ಮಾಡಿಕೊಡಿ ಎಂದು ಕೇಳುವುದಿಲ್ಲ. ಯಾವ ಯಾವ ಹಾನ್ಪಲುಗಳು ಸರ್ಕಾರಿ aidನ್ನು ಪಡೆಯುತ್ತಿದ್ದಾರೋ ಅಂಥವರು ಹಿಂದುಳಿದ ಪಂಗಡದವರಿಗೆ ಶೇಕಡ 25 ಸೇರಿಸಿಕೊಳ್ಳಬೇಕು. ಮತ್ತು ಬೇರೆ ಜನಾಂಗದವರಿಗೆ ಶೇಕಡ 25 ಈ ರೀತಿ ಸೇರಿಸಿಕೊಳ್ಳುವಂತೆ ಸರಕಾರದವರು ಪ್ರಯತ್ನಮಾಡಬೇಕು ಎಂದು ಹೇಳುತ್ತೇನೆ.

Mr. SPEAKER.—Now the House will rise for lunch and meet at 3-35 P.M.

The House adjourned for Lunch at Five Minutes past Three of the Clock and re-assembled again at Thirty-five Minutes past Three of the Clock.

[MR. SPEAKER in the Chair.]

Mr. SPEAKER.—Cut motion No. 32 by Sri Narayana Gowda.

Reorganisation of supervisory officers.

*ಶ್ರೀ ಬಿ. ನಾರಾಯಣಗೌಡ (ಮುಳಬಾಗಲು-ಶ್ರೀನಿವಾಸಪುರ).—ನಮ್ಮ ದೇಶದಲ್ಲಿ ಅನೇಕ ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢ ಶಾಲೆಗಳು ಇವೆ. ಒಂದು ದೇಶದ ಪ್ರಗತಿಗೆ ಈ ಪಾಠಶಾಲೆಗಳೇ ಸಾಧನಗಳು ಎಂಬುದು ನಮಗೆಲ್ಲರಿಗೂ ತಿಳಿದಿರುವ ವಿಷಯ. ಈ ಶಾಲೆಗಳ ಮೇಲ್ವಿಚಾರಣೆಯ ವಿಷಯದೊಳಗೆ ನಾವು ಈಗಿರುವ ಪದ್ಧತಿಯನ್ನು ಪುನರ್ವಿಮರ್ಶೆ ಮಾಡಿ ಬೇರೆ ರೀತಿಯಾದ ಮೇಲ್ವಿಚಾರಣೆಯನ್ನು ಜಾರಿಗೆ ತರುವುದು ಒಳ್ಳೆಯದೆಂದು ನನ್ನ ಭಾವನೆ. ಏತಕ್ಕೆಂದರೆ, ಈಗ ಸಾಮಾನ್ಯವಾಗಿ ಪ್ರಾಥಮಿಕ ಶಾಲೆಗಳ Rangesಗೆ Range Inspector ಮೇಲ್ವಿಚಾರಕರಾಗಿದ್ದಾರೆ. ಮಾಧ್ಯಮಿಕ ಶಾಲೆಗಳಿಗೆ D.E.O. ಮೇಲ್ವಿಚಾರಕರಾಗಿದ್ದಾರೆ. ಆಮೇಲೆ ಸಂಸ್ಥಾನದಲ್ಲಿ ಒಬ್ಬರು D.D.P.I. ಮಾಧ್ಯಮಿಕ ಸ್ಕೂಲುಗಳಿಗೂ, ಮತ್ತೊಬ್ಬ D.D.P.I. High School ಗಳಿಗೂ ಮೇಲ್ವಿಚಾರಕರಾಗಿದ್ದಾರೆ. ಈ ರೀತಿಯಿರುವ ಶಾಲೆಗಳ ಮೇಲ್ವಿಚಾರಣೆ ಅಷ್ಟು ಸಮರ್ಪಕವಾಗಿ ಆಗುತ್ತಾ ಇಲ್ಲ ಎಂದು ಭಾವಿಸುತ್ತೇನೆ. ಹೆಚ್ಚು ಪಾಠಶಾಲೆಗಳು ಇರುವುದರಿಂದ ಒಬ್ಬ D.D.P.I. ಸಂಸ್ಥಾನದ ಎಲ್ಲಾ ಮಾಧ್ಯಮಿಕ ತರಗತಿಗಳನ್ನಾಗಲಿ ಇನ್ನೊಬ್ಬ D.D.P.I. ಪ್ರೌಢ ಶಾಲೆಗಳಿಗಾಗಲಿ ಅಥವಾ ಶೇಕಡ 60 ಪಾಠಶಾಲೆಗಳನ್ನಾಗಲಿ ನೋಡುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ನಮ್ಮ ಸಂಸ್ಥಾನವನ್ನು ಮೂರು ಯೂನಿಟ್ಟುಗಳಾಗಿ ಮಾಡಿ ಒಂದೊಂದು ಯೂನಿಟ್ಟನ್ನು ಒಬ್ಬೊಬ್ಬ ಅಧಿಕಾರಿಗೆ ವಹಿಸಿ ಹೆಚ್ಚು ಸಮರ್ಪಕವಾಗಿ ಕೆಲಸ ನಡೆಯುವಂತೆ ಮಾಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಹೀಗೆ ಮಾಡಿದರೆ ಪಾಠಶಾಲೆಗಳಲ್ಲಿ ಹೆಚ್ಚು ದಕ್ಷತೆಯಿಂದ ಕೆಲಸ ನಡೆಸಿದಂತಾಗುತ್ತದೆ.

Educational Reforms.

Sri V. M. MASCARENHAS (St. John's Hill).—Mr. Speaker, Sir, Hon'ble Members are aware of the long discussion that took place in this very House when about 18 months ago the Educational Reforms were first discussed, and the amount of criticisms that were levelled against the Educational Reforms in general. Now, that the Reforms have been introduced, we might ask where we stand? First of all, I do not understand, when the rest of India has not come in line to change their curriculum and their year from January to January as we have done, how the boys or girls coming from other parts of India could study in our schools and colleges since they would be affected on account of the change in the year itself. Secondly, this year in a hurry, in the month of January, the Reforms were introduced. Now, that the examinations have been abolished for lower secondary boys, they have been promoted to the Fourth Form. I just want to inform the Government what has happened in the City of Bangalore itself in this connection. Hundreds of boys have been roaming from school to school with the hope of getting admission to the Fourth Form but with very little success. I do not know what exactly the Government have in view to accommodate this large number of boys and girls in Bangalore and in other big cities of the State. Thirdly, dates of examinations have all changed. As far as we know, the University Examinations which should have been held on March 11th have now been postponed to April 11th. By the time the results are out and by the time new admissions are made, we are aware by experience that it will be about the end of July. What happens to the large number of boys and girls who will pass the School Final this year? Next January they will have to be promoted. How are the Government going to accommodate that large group of boys and girls? Over and

above this, the University, as we all now know, will have a three year course and the High School gets an extra class. What is the fate of our Intermediate Colleges spread all over the State and what is the fate of our First Grade Colleges is not very clear as yet. Are our High Schools going to be upgraded? Are our Intermediate Colleges going to be abolished? Are our University First Grade Colleges going to have three years' courses? How is this picture going to be fitted into the existing system without the least discomfiture to anybody, without the least inconvenience to anybody is not so far made clear. I would request the Government to tell us, now that they have introduced educational reforms—I do not say that they have done it in a hurry—whether they have really given consideration to these mighty problems which affect the school boys of this country to the tune of a few lakhs which, in turn, is causing a certain amount of worry and anxiety to their parents. I hope the Minister in reply will tell us categorically that there will be no confusion in the whole State when the new year begins in January next.

Administration of Maharaja's Samskrita College.

Sri B. P. NAGARAJA MURTHY (Malavalli).—Instead of 46, I will speak on 45.

ಸ್ವಾಮಿ, ಮೈಸೂರಿನಲ್ಲಿರುವ ಮಹಾರಾಜರವರ ಸಂಸ್ಕೃತ ಕಾಲೇಜಿನ Principalರ ಕಾರ್ಯದಕ್ಷತೆ ಮತ್ತು ಅವರು ಯಾವ ರೀತಿ ಆಡಳಿತವನ್ನು ನಿರ್ವಹಿಸುತ್ತಾರೆ ಎನ್ನುವ ವಿಚಾರದಲ್ಲಿ ಕೆಲವು ಪತ್ರಿಕೆಗಳಲ್ಲಿ ಕೂಡ ಲೇಖನಗಳು ಪ್ರಕಟವಾಗಿದ್ದುವು. Principalರು ಅವರ ಆಡಳಿತ ಎಷ್ಟರ ಮಟ್ಟಿಗೆ ನಿರ್ವಹಿಸುತ್ತಿದ್ದಾರೆ ಎಂಬುದಕ್ಕೆ ಒಂದೇ ಒಂದು ಉದಾಹರಣೆ ಕೊಡುತ್ತೇನೆ. ಹೋದ ವರ್ಷ ಶಕ್ತಿ ವಿಶಿಷ್ಟಾದ್ವೈತ ವೇದಾಂತ ಪರೀಕ್ಷೆಯನ್ನು ನಡೆಸಲಾಯಿತು. ಈ ಪರೀಕ್ಷೆಗೆ Principalರೂ ಕೂಡ ಒಬ್ಬರು Examiner ಆಗಿದ್ದರು. ಪರೀಕ್ಷಾ ಕೇಂದ್ರಗಳು ಮೈಸೂರು ಮತ್ತು ಬೆಂಗಳೂರಿನಲ್ಲಿದ್ದುವು. ಆ ಪರೀಕ್ಷೆಯಲ್ಲಿ ಕೆಲವು ಪ್ರಶ್ನೆಗಳು ಪರೀಕ್ಷೆಗೆ ಮೊದಲೇ ರಹಸ್ಯವಾಗಿ ಪ್ರಕಟವಾಗಿದ್ದು ಅದರ ಅನುಕೂಲ ಪಡೆದು, ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಹೆಚ್ಚಿನ ಸಂಖ್ಯೆಗಳನ್ನು ತೆಗೆದುಕೊಳ್ಳುವುದಕ್ಕೆ ಅವಕಾಶವಾಯಿತು ಎಂಬ ಒಂದು ಆರೋಪಣೆಯ ಮೇಲೆ ಒಂದು ವಿಶೇಷ ಸಮಿತಿಯನ್ನು ಸಹ ರಚನೆಮಾಡಿ, ಆ ಸಮಿತಿಯವರೂ ಕೂಡ ಆ ಪ್ರಶ್ನೆಯನ್ನು ಬಹಳ ಕೂಲಂಕಷವಾಗಿ ಚರ್ಚೆ ಮಾಡಿ "ಇದರಲ್ಲಿ ಬಂದಿರತಕ್ಕಂಥ ಆರೋಪಣೆಗಳಿಗೆ ಕೆಲವು ಆಧಾರಗಳಿವೆ, ಅದ್ದರಿಂದ ಈ ಪರೀಕ್ಷೆಗಳನ್ನು ಪುನಃ ಮಾಡುವುದು ಒಳ್ಳೆಯದು; ಮತ್ತು ಈಗ ನಡೆದಿರತಕ್ಕಂಥ ಪರೀಕ್ಷೆಯನ್ನು ರದ್ದುಮಾಡಿ" ಎಂದು ಒಂದು ರಿಪೋರ್ಟನ್ನು ಕಳುಹಿಸಿದರು. ಅದರ ಮೇಲೆ ಪರೀಕ್ಷೆ ಮಾಡುವುದಕ್ಕೆ ರಚಿಸಿದಂಥ ಬೋರ್ಡಿನವರು ಕೂಡ ಅದೇ ಅಭಿಪ್ರಾಯಪಟ್ಟು ಸರ್ಕಾರಕ್ಕೂ ಕೂಡ ಆ ಸಮಿತಿಯ ವರದಿ ಬಂದಿದೆಯೆಂದು ನಾನು ತಿಳಿದಿದ್ದೇನೆ. ಪುನಃ ಈ ವರ್ಷ ಅದೇ ಪರೀಕ್ಷೆ 14ನೇ ತಾರೀಖು ಪ್ರಾರಂಭವಾಯಿತೆಂದು ಕೇಳಿದ್ದೇನೆ. ಪ್ರಾರಂಭವಾಗಿದೆಯೋ ಏನೋ ಗೊತ್ತಿಲ್ಲ. ಈ ತಹಲ್ ವರೆಗೆ ಹೋದ ವರ್ಷ ನಡೆದ ಪರೀಕ್ಷೆಯ ಫಲತಾಂಶ ಹೊರಬೀಳದೆ ಇರುವುದು ಬಹಳ ಶೋಚನೀಯವಾಗಿದೆ. ಒಂದು ವೇಳೆ ಹಿಂದಿನ ಪರೀಕ್ಷೆಯಲ್ಲಿ ಕುಳಿತಿದ್ದ ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ತೇರ್ಗಡೆಯಾಗದಿದ್ದರೆ ಅವರು ಪುನಃ ಪರೀಕ್ಷೆಗೆ ಕುಳಿತುಕೊಳ್ಳುವ ಅವಕಾಶ ಬಿಲ್ಲದಂತೆ ತಡೆಯಾಗಿದೆ ಎಂಬುದನ್ನು ನಾನು ಸರ್ಕಾರದ ಗಮನಕ್ಕೆ ತರಬೇಕಾಗಿದೆ.

ಈ ರೀತಿ ಒಂದು ವರ್ಷದ ಹಿಂದೆ ನಡೆದಂಥ ಪರೀಕ್ಷೆಯ ಫಲತಾಂಶ ಇನ್ನೊಂದು ಪರೀಕ್ಷೆ ನಡೆಯುವ ವರೆಗೂ ಹೊರಪಡದೆ ಇದ್ದರೆ ಆ ಪರೀಕ್ಷೆಯ ವಿದ್ಯಾರ್ಥಿಗಳ ಗತಿಯೇನು? ಅವರಿಗೆಷ್ಟು ಅನಾನುಕೂಲವಾಯಿತೆಂಬುದನ್ನು ಸರ್ಕಾರದವರು ಗಮನಕ್ಕೆ ತೆಗೆದುಕೊಳ್ಳಬೇಕು. ಅಲ್ಲಿನ ಪ್ರಿನ್ಸಿಪಾಲರು ಅಲ್ಲಿನ ವಿದ್ಯಾರ್ಥಿಗಳ ಜೊತೆಯಲ್ಲಿ ಮತ್ತು ನೌಕರವರ್ಗದಲ್ಲಿ ಯಾವ ರೀತಿ ವರ್ತಿಸುತ್ತಾರೆಂಬುದೂ ಅನೇಕ ಸಾರಿ ಪ್ರಕಟವಾಗಿದೆ. ಅಲ್ಲದೆ, ಅವರು ಒಂದು ಸಂಸ್ಕೃತ ಕಾಲೇಜಿನ ಅಧ್ಯಾಪಕರಾಗಿದ್ದರೂ ಕೂಡ ತಮ್ಮ ನಿರ್ದಿಷ್ಟವಾದ ಕಾರ್ಯವನ್ನು ಬಿಟ್ಟು ಹೊರಗಿನ ರಾಜಕೀಯದಲ್ಲಿ ಪ್ರವೇಶ ಮಾಡಿ ಎಷ್ಟು ಅವ್ಯವಸ್ಥೆಯನ್ನು ಆ ಸಂಸ್ಥೆಯಲ್ಲಿ ತಂದಿದ್ದಾರೆಂಬುದನ್ನೂ ತಾವು ಗಮನಿಸಬೇಕೆಂದು ಹೇಳುತ್ತೇನೆ. ಅದ್ದರಿಂದ ಪ್ರಾಜ್ಞಾನದ ಆದಿ ಸ್ಥಾನವಾದ ಈ ಪಾಠಶಾಲೆಯವರು ರಾಜಕೀಯದಲ್ಲಿ ಪ್ರವೇಶ ಮಾಡುವುದನ್ನೂ ದಕ್ಷತೆಯ ಲೋಪದೋಷಗಳೆರುವುದನ್ನೂ ನೋಡಿ ಸೂಕ್ತ ಕಾರ್ಯಕ್ರಮ ಕೈಗೊಂಡು ಸರಿಪಡಿಸಬೇಕೆಂದು ಹೇಳುತ್ತೇನೆ.

ಅಲ್ಲದೆ, ಮೈಸೂರು ಮಹಾರಾಜರವರ ಸಂಸ್ಕೃತ ಕಾಲೇಜಿಗೆ ಒಬ್ಬರು ಪ್ರಿನ್ಸಿಪಾಲರನ್ನು ನೇಮಕಮಾಡುವುದರಲ್ಲೂ ಕೂಡ ಅನಾಧಾರಣವಾಗಿ ಕಾಲವಿಳಂಬವಾಗಿದೆಯೆಂಬುದನ್ನೂ ನಾನೂ ಈ ಸಂದರ್ಭದಲ್ಲಿ ಸರ್ಕಾರದವರ ಗಮನಕ್ಕೆ ತರಬಯಸುತ್ತೇನೆ. ಈ ವಿಷಯದಲ್ಲಿ ಏನೇನು ಆಗಬೇಕೋ ಅದೆಲ್ಲಾ ಆಗಿ ಪಬ್ಲಿಕ್ ಸರ್ವಿಸ್ ಕಮಿಷನ್‌ನವರ ವರದಿ ಕೂಡ ಬಂದಿದೆ. ಆದರೂ ಸರ್ಕಾರದವರು ನಿರ್ದಿಷ್ಟವಾದ ತೀರ್ಮಾನಕ್ಕೆ ಬಂದಿಲ್ಲದಿರುವುದರಿಂದ ಈ ಪಾಠಶಾಲೆಯ ಅಭಿವೃದ್ಧಿಗೆ ಧಕ್ಕೆ ತಂದಂತಾಗಿದೆಯೆಂದು ನಾನು ಸರ್ಕಾರದವರಿಗೆ ತಿಳಿಸಬಯಸುತ್ತೇನೆ.

Non-admission of students to High Schools of Corporation area.

* Sri R. ANANTARAMAN (Chamarajapet).—Mr. Speaker, Sir, Sri V. M. Mascarenhas has already come to my aid while speaking on his cut motion. I do not want to discuss at length except to bring to the notice of

(SRI R. ANANTARAMAN.)

Government that due to the implementation of this Educational Reform schemes, many students have not been admitted to the IV form in the Corporation area of the City of Bangalore. In fact, stories are told, Sir, that even while the students are being admitted they will have to pay certain fee either to the Head Master or the Head Mistress of the Schools ; if that is done, I do not know how many students will be thrown out of schools. Under the circumstances, it is better that the Government will add one more section. I know their financial difficulty ; it is very difficult for them to build a new high school or open new high schools or add some structure to the existing buildings, but they can add one more section to each high school so that the children will be accommodated or they can start morning classes for those boys and girls and appoint some more teachers for this purpose. I am sure, the fees paid by these students will be sufficient to cover the salaries of those teachers and thereby the unemployment problem also will be solved. I am told, Sir, in America, there will be at least three or four shifts in a day and the students can study at leisure and become graduates and at the same time earn their livelihood. It is better Government will also follow the system of shift so that accommodation will not be refused to any child. I am told, Sir, in Chamarajpet, in my area, nearly more than 60 to 70 children have been refused admission on account of accommodation. The District Educational Officer has promised to accommodate them, but I do not know when he will do so. Anyway he has promised to accommodate them by the end of 25th of this month. I request the Government to pay attention to this fact, and thus help the students to get accommodation.

Samskriti Prachar

ಶ್ರೀ ಬಿ. ಪಿ. ನಾಗರಾಜಮೂರ್ತಿ.—ಅಧ್ಯಕ್ಷರೆ, ಮೈಸೂರು ಸರ್ಕಾರದವರು ಸಂಸ್ಕೃತಿ ಪ್ರಚಾರದ ವಿಚಾರದಲ್ಲಿ ಆಗಲೇ ಬಹಳ ಮುಂದುವರಿದಿದ್ದಾರೆ. ಆದ್ದರಿಂದ ಈಗ ಸಂಸ್ಕೃತಿ ಪ್ರಚಾರದ ಉದ್ದೇಶ ಮತ್ತು ಅದನ್ನು ಮುಂದುವರಿಸುವ ಅಥವಾ ಬಿಡುವ ವಿಷಯಕ್ಕೆ ನಾನು ಹೋಗುವುದಿಲ್ಲ. ಸದ್ಯಕ್ಕೆ ಸಂಸ್ಕೃತಿ ಪ್ರಚಾರ ಯಾವ ರೀತಿ ಪ್ರಚಾರವಾಗುತ್ತಿದೆಯೆಂಬ ಬಗ್ಗೆ ಸರ್ಕಾರದವರ ಗಮನಕ್ಕೆ ಕೆಲವು ಗಮನಾರ್ಹವಾದ ವಿಷಯಗಳನ್ನು ತರಬೇಕಾಗಿದೆ.

ಸಂಸ್ಕೃತಿ ಪ್ರಚಾರಕ್ಕೆ ಒಬ್ಬ ಅಧಿಕಾರಿಯನ್ನು ನೇಮಿಸಿದ್ದೀರಿ. ಅವರ ಪಾಂಡಿತ್ಯದ ವಿಷಯದಲ್ಲಾಗಲಿ, ಮೇಧಾಶಕ್ತಿಯ ವಿಷಯದಲ್ಲಾಗಲಿ ನಾನೇನೂ ಹೇಳಬೇಕಾಗಿಲ್ಲ. ಅವರ ವಿಷಯದಲ್ಲಿ ನನಗೆ ಪೂಜ್ಯ ಭಾವನೆಯಿದೆಯೆಂದು ಹೇಳುತ್ತೇನೆ. ಏನಿದ್ದರೂ ಇವತ್ತಿನ ದಿವಸ ಯಾವ ರೀತಿಯಲ್ಲಿ ಅವರ ಕಾರ್ಯ ನಿರ್ವಹಣೆಯಾಗುತ್ತಿದೆಯೆಂಬುದನ್ನು ಸರ್ಕಾರದವರು ಗಮನಿಸಬೇಕಾಗಿದೆ. ಈ ಹೊತ್ತು ನುಮಾರು ನೂರು ಕೇಂದ್ರಗಳಲ್ಲಿ ಪ್ರಚಾರ ನಡೆಯುತ್ತಿದೆಯೆಂದು ಸರ್ಕಾರದವರೂ ಮತ್ತು ಸಂಬಂಧಪಟ್ಟ ಅಧಿಕಾರಿಗಳೂ ತಿಳಿಸಿದ್ದಾರೆ. ಈ ಬಗ್ಗೆ ನುಮಾರು ನೂರು ಕೇಂದ್ರಗಳಿಂದ ನಾಲ್ಕು ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ಈ ಸಾರಿಯೂ ಕೂಡ ನಾಲ್ಕು ಲಕ್ಷ ರೂಪಾಯಿಗಳನ್ನು ಮುಡುಪಾಗಿಟ್ಟಿದ್ದಾರೆ. ಆದರೆ ನೂರು ಕೇಂದ್ರಗಳಲ್ಲೂ ಪ್ರಚಾರ ಯಾವ ರೀತಿ ನಡೆಯುತ್ತಿದೆಯೆಂಬುದನ್ನು ಗಮನಿಸಬೇಕು.

ಈ ಕೇಂದ್ರಗಳಲ್ಲಿ ಪ್ರಚಾರ ಮಾಡತಕ್ಕ ಮಹನೀಯರ ಪಟ್ಟಿಯನ್ನು ಮೊದಲೇ ತಯಾರು ಮಾಡಿರುತ್ತಾರೆ. ಆ ಪಟ್ಟಿಯಲ್ಲಿ ಯಾವ ರೀತಿ ಏರ್ಪಾಡಾಗಿದೆಯೆಂದರೆ, ಚಿತ್ರದುರ್ಗದಲ್ಲಿರುವವರನ್ನು ಮೈಸೂರು ಜಿಲ್ಲೆಗೆ ಬಂದು ಪ್ರಚಾರ ಮಾಡಿ ಎನ್ನುವುದು, ಮೈಸೂರಿನಲ್ಲಿರುವವರನ್ನು ಚಿತ್ರದುರ್ಗಕ್ಕೆ ಹೋಗಿ ಎನ್ನುವುದು-ಹೀಗೇ ಏರ್ಪಾಡು ಮಾಡಿ, ನೀವು ಓದಗಿಸಿರುವ ಮೊಬಲಗಿನಲ್ಲಿ ಹೆಚ್ಚುಭಾಗ ಪ್ರಚಾರಕರ ಪ್ರಯಾಣ ಭತ್ಯಕ್ಕೇ ಹೆಚ್ಚಾಗಿ ಖರ್ಚಾಗಿದೆ. ಕೊನೆಗೆ, ಇಷ್ಟು ದೂರ ಹೋದರೂ ಕೂಡ ಕಾರ್ಯತಃ ಏನಾದರೂ ಕೆಲಸ ನಡೆಯುತ್ತಿದೆಯೇ ಎಂಬುದಕ್ಕೆ ಒಂದು ಉದಾಹರಣೆಯನ್ನು ಹೇಳುತ್ತೇನೆ.

ಒಬ್ಬ ಮಹನೀಯರು ಬೆಂಗಳೂರಿನಿಂದ ಚಿತ್ರದುರ್ಗಕ್ಕೆ ಹೋಗಿ ಪ್ರಚಾರ ಮಾಡಬೇಕಾಗಿತ್ತು. ಅದರಂತೆ ಅವರು ಅಮಲ್ದಾರರ ಹತ್ತಿರ ಹೋದಾಗ ಅವರು 'ರೆವಿನ್ಯೂ ಇನ್ಸ್ಪೆಕ್ಟರಿಗೆ ತಿಳಿಸಿದ್ದೇನೆ, ಅಲ್ಲಿಗೆ ಹೋಗಿ' ಎಂದು ಹೇಳಿಕಳುಹಿದರು. ಅದೇ ಪ್ರಕಾರ ರೆವಿನ್ಯೂ ಇನ್ಸ್ಪೆಕ್ಟರ ಹತ್ತಿರಕ್ಕೆ ನಿಯಮಿತ ಕಾಲವಾದ ನಾಲ್ಕು ಘಂಟೆಯ ವೇಳೆಗೆ ಅವರು ಹೋದರೆ, ಅಲ್ಲಿ ನಾಲ್ಕು ಘಂಟೆಯಾದರೂ ಏನೂ ಪ್ರಾರಂಭವೇ ಆಗಿರಲಿಲ್ಲ. ಇನ್ಸ್ಪೆಕ್ಟರನ್ನು ಕೇಳಿದರೆ, ಜನರು ತಾವು ಮೂರೂವರೆ ಘಂಟೆಗೆ ಬರುತ್ತೀರೆಂದು ಭಾವಿಸಿ ಇದುವರೆಗೂ ಕಾದಿದ್ದು ಎಲ್ಲರೂ ಎದ್ದು ಹೋದರು ಎಂದು ತಿಳಿಸಿದರು. ಪ್ರಚಾರಕರಿಗೆ ತುಂಬ ವ್ಯಥೆಯಾಗಿ, ಬೆಂಗಳೂರಿನಿಂದ ಪ್ರಚಾರ ಮಾಡಬೇಕೆಂದು ಹೇಳಿ ಶ್ರಮಪಟ್ಟು ಬಂದಿದ್ದೇನಲ್ಲಾ ಏನು ಮಾಡಲಿ ಎಂದು ಕೇಳಿದ್ದಕ್ಕೆ, ಅವರು "ಏನೂ ಯೋಚನೆ ಮಾಡಬೇಡಿ, ಸಾರ್. ಮಾಡಿದ್ದೇನೆ ಎಂದು ಬರೆದು ಕಳುಹಿಸಿ" ಎಂದು ಹೇಳಿ ಕಳುಹಿಸಿದರಂತೆ.

ಇನ್ನೊಂದು ಹೀಗೆಯೇ ಪ್ರಸಂಗ. ಬೆಂಗಳೂರಿನಿಂದ ಚಾಮರಾಜನಗರಕ್ಕೆ ಸಂಸ್ಕೃತಿ ಪ್ರಚಾರಕ್ಕೊಬ್ಬರನ್ನು ಕಳುಹಿಸಿದ್ದರು. ಆ ಸ್ಥಳಕ್ಕೆ ಅವರು ಅಪರಿಚಿತರು. ಅಪರಿಚಿತರು ಹೋದರೆ, ರೈಲ್ವೆ ಸ್ಟೇಷನ್ನಿಗೆ ಹೋಗಿ ಅವರನ್ನು ಎದುರುಗೊಂಡು ಕರೆದುಕೊಂಡು ಹೋಗುವವರಿಲ್ಲ. ಕೊನೆಗೆ ಆ ಮಹನೀಯರು ತಾವೇ

ಹಾಸಿಗೆ ಹೊರಿಸಿಕೊಂಡು ಟಿ. ಬಿ. ಗೆ ಹೋದರೆ ಅಲ್ಲಯೂ ಅವಕಾಶವಿಲ್ಲ. ಕೊನೆಗೆ ಮಿಸಾಫರ್ ಖಾನೆಗೆ ಹೋದರೆ, ಅಲ್ಲಿ ಒಬ್ಬ ಜವಾನ ಬಂದು 'ಅಮಲ್ದಾರ್ ಸಾಹೇಬರು ತಮ್ಮನ್ನು ಪ್ರೈಮರಿ ಸ್ಕೂಲಿಗೆ ಬರ ಹೇಳಿದ್ದಾರೆ' ಎಂದು ತಿಳಿಸಿದ. ಆ ಪ್ರಚಾರಕರಿಗೆ ಪ್ರೈಮರಿ ಸ್ಕೂಲು ಎಲ್ಲಿದೆಯೆಂಬುದೂ ಗೊತ್ತಿರಲಿಲ್ಲ. ಜವಾನನನ್ನು ತನ್ನನ್ನು ಕರೆದುಕೊಂಡು ಹೋಗಬೇಕು ಎಂದು ಕೇಳಿದಕ್ಕೆ ಅವನು ತನಗೆ ಆಗುವುದಿಲ್ಲ ಯಾರ ನ್ನಾದರೂ ಕೇಳಿಕೊಂಡು ಬನ್ನಿ ಎಂದು ಹೇಳಿ ಹೊರಟು ಹೋದ. ಪ್ರಚಾರಕರ ಪ್ರವಾಸದ ಅನುಭವ ಅವರಿಗೆ ಸಾಕುಸಾಕಾಗಿ ಹೋಗಿತ್ತು, ಹಾಗೂ ಕೊನೆಗೆ ಕಷ್ಟ ಪಟ್ಟುಕೊಂಡು ಪ್ರೈಮರಿ ಸ್ಕೂಲಿಗೆ ಹೋದರೆ ಅಲ್ಲಿ ಯಾರೂ ಇಲ್ಲ! ಅಮಲ್ದಾರರು, ರೆವಿನ್ಯೂ ಇನ್‌ಸ್ಪೆಕ್ಟರು ಅರು ಘಂಟೆಗೆ ಬಂದರು. ಪ್ರಚಾರ ಮಾಡುವುದನ್ನು ಕೇಳುವುದಕ್ಕೂ ಯಾರೂ ಇಲ್ಲ. 'ನಾನು ಬಂದರೆ ಒಂದು ವಸತಿ ಸೌಕರ್ಯದ ಏರ್ಪಾಡಿಲ್ಲ; ನನಗೆ ಸ್ನಾನ ಕೂಡ ಇಲ್ಲ, ಪ್ರಚಾರ ಎಲ್ಲಿ ಮಾಡಬೇಕೋ ಅದೂ ಗೊತ್ತಿಲ್ಲ' ಎಂದು ಅಮಲ್ದಾರರನ್ನು ಕೇಳಿದ್ದಕ್ಕೆ ಅಮಲ್ದಾರರು 'ತಾವು ಇಲ್ಲಿಗೆ ಆಫೀಸರಾಗಿ ಬಂದಿಲ್ಲ; ಮೈಯಕ್ತಿಕವಾಗಿ ಬಂದಿರುವುದರಿಂದ ಅದೇನನ್ನೂ ಮಾಡಿಕೊಡುವುದಕ್ಕೆ ಅವಕಾಶವಿಲ್ಲ' ಎಂದು ಹೇಳಿದರಂತೆ. 'ಹೋಗಲಿ, ತಡವಾಗಿ ಏಕೆ ಬಂದಿರಿ' ಎಂದು ಕೇಳಿದರೆ, 'ಸಾಮಾನ್ಯವಾಗಿ ಇಲ್ಲಿ ಪ್ರಚಾರವನ್ನು ಕೇಳುವುದಕ್ಕೆ ಬರುವವರೆಲ್ಲರೂ ಎರಡು ಘಂಟೆ ತಡವಾಗಿಯೇ ಬರುತ್ತಾರೆ: ಅದಕ್ಕಾಗಿಯೇ ತಡವಾಗಿ ಬಂದೆವು' ಎಂದು ಉತ್ತರ. ಕೊನೆಗೆ ಅಲ್ಲಿ ಪ್ರಚಾರಕ್ಕೆ ಯಾರೂ ಇಲ್ಲವೆಂದು ಹೇಳಿ, ಅಲ್ಲದ್ದ ಕೆಲವು ಬಾಲಕರಿಗೆ, ವಿದ್ಯಾರ್ಥಿಗಳಿಗೆ 'ಅತಿಥಿ ಸತ್ಕಾರ' ಎಂಬ ವಿಷಯವನ್ನೇ ಪ್ರಚಾರ ಮಾಡಿ ಬಂದರಂತೆ. ಈ ರೀತಿಯಿದೆ ಈ ಪ್ರಚಾರಗಳ ವೈಖರಿ!

ಇನ್ನೊಂದು ಸಂಸ್ಥೆಯ ವಿಷಯ ಹೇಳಬೇಕಾದರೆ,—ಅದು ನಾನೂ ಮತ್ತು ನನ್ನ ಮಿತ್ರರಾದ ಶ್ರೀ ಚಿಕ್ಕಲಿಂಗಯ್ಯನವರು ಸಂಸ್ಕೃತಿ ಪ್ರಚಾರದಲ್ಲಿ ಭಾಗ ವಹಿಸಿದ ಸಮಾರಂಭ. ಸಂಸ್ಕೃತಿ ಪ್ರಚಾರಕರು ಬಂದರೆ ಒಬ್ಬರೂ ಜನ ಬರಲಿಲ್ಲ. ನಾವು ನಮ್ಮ ಪಾರ್ಟಿಯ ಒಂದು ಸಮಾರಂಭವನ್ನು ಸೇರಿಸಿದ್ದೆವು, ಆ ಸಮಾರಂಭಕ್ಕೆ ಜನ ಸೇರಿದ್ದರು. ಆಗ ಆ ಪ್ರಚಾರಕರು ಅದೇ ಅವಕಾಶವನ್ನು ಉಪಯೋಗಿಸಿಕೊಂಡು, ಸರ್ಕಾರದವರ 'ಸಂಸ್ಕೃತಿ ಪ್ರಚಾರದ ಅಜೀರ್ಣದ ವ್ಯಾಧಿಯಾಗಿದೆ.' ಎಂದು ಭಾಷಣಮಾಡಿ ಹೊರಟು ಹೋದರು.

ಈ ಪ್ರಕಾರ ನಿಜವಾಗಿ ಯಾವ ಉದ್ದೇಶದಿಂದ ದೇಶದಲ್ಲಿ ಸಂಸ್ಕೃತಿ ಪ್ರಚಾರವನ್ನು ಪ್ರಾರಂಭಿಸಿದರೋ ಆ ಉದ್ದೇಶ ನೆರವೇರುತ್ತಿಲ್ಲ. ಇದರಿಂದ ನಿಜವಾದ ಪ್ರಯೋಜನವಾಗಬೇಕಾದರೆ ಇದರ ಕಾರ್ಯಾಡಳಿತವನ್ನು ಬದಲಾಯಿಸಿ ದಕ್ಷರಾದ ಅಧಿಕಾರಿಗಳನ್ನು ನೇಮಿಸುವುದು ಸೂಕ್ತವೆಂದು ಹೇಳುತ್ತೇನೆ.

Sri J. MOHAMED IMAM (Jagalur).—I think, Sir, on some of these cut motions, there are other members who would like to express their opinion. I would like to have a ruling on this matter, because when a cut motion is moved and placed before this House, other members also, who would either agree or disagree, would like to take part in the discussion and express their opinion.

Mr. SPEAKER.—We shall take up that question at 4 o'clock and decide.

Anglo-Indian Schools.

Sri SYDNEY A. THOMAS (Nominated).—With your kind permission, Sir, I should like to read the first two clauses of article 337 of the Constitution of India which has a bearing on the cut motion tabled by me.

> "337.—During the first three financial years after the commencement of this Constitution, the same grants, if any, shall be made by the Union and by each State specified in Part A or Part B of the First Schedule for the benefit of the Anglo-Indian community in respect of education as were made in the financial year ending on the thirty-first day of March 1948.
>
> During every succeeding period of three years the grants may be less by ten per cent than those for the immediately preceding period of three years:"

Sir, as in Mysore, so also with the other States, and more especially in Bombay and Madras, there was some confusion as to the correct interpretation of these first two clauses. The difficulty lay in interpreting as to when these cuts should be effected, and whether the 10 per cent discretionarys cuts should be 10 per cent of the sanctioned grants, or ten per cent of the actuals. On a reference made to the Central Government, the Centre's interpretation has come out very correctly and clearly that these cuts would be effected, that is, a 10 per cent cut, only from 1953-54, and that the cut of 10 per cent should be on the sanctioned or budgeted amount of grant. The Bombay Government and the Madras Government acted straightaway and set matters aright. But here in Mysore, Sir, in spite of my repeated representations on the floor of this House, in spite of repeated communications, nothing seems to have been done in this matter. In this connection I would draw your attention

(SRI SYDNEY A. THOMAS.)

to certain instances of schools affected Sir. These are the figures furnished by the Minister in answer to my Question No. 246. St. Joseph's High School, sanctioned grant for 1949-50 is Rs. 14,000: in 1950-51, it was reduced to Rs. 11,500, long before the cut could become effective; for 1951-52, Rs. 12,500; 1952-53, Rs. 10,800. I can go on citing several instances regarding these schools. This one is an outstanding and glaring instance: the other day when I took up the matter by way of an interpellation, the Hon'ble Minister for Education was pleased to observe that the Hon'ble Member seems to be confused. I am very clear on this point, Sir.

*SRI A. G. RAMACHANDRA RAO (Minister for Law and Education).—The other day the question was regarding the last item of Rs. 7,000—I forgot the name of the School. I stated, it was not a 10 per cent cut, but it was a grant given as per calculation whereby I meant that a certain proportion of the expenditure *minus* their income, certain proportion. That is intact. It does not represent a ten per cent cut. If you differ from me on this point, you please come to me, I shall clarify the matter further.

4 P.M.

SRI SYDNEY A. THOMAS.—How do you reconcile that Rs. 7,000 cut with the provision of 10 per cent in the Constitution

SRI A. G. RAMACHANDRA RAO.—Rs. 7,000 does not repesent the result of any cut. If there should be any difficulty, you please come to the office; I will get all the figures. You bring the Principal of the institution also to discuss; that would be better.

SRI SYDNEY A. THOMAS.—Thank you. Now I am confused, because the original amount for the school in 1948-49 was Rs. 12,000. In 1953-54 you bring it down to Rs. 7,000. Yet the Constitution permits only a 10 per cent cut.

SRI A. G. RAMACHANDRA RAO.—I will make it easier. Let me request the Principal to meet me. If there is any difficulty, we will solve it. Really, there is some confusion in your mind. As it is, I am not able to convince you. Let them come. I will satisfy. I want to strictly follow the rules. As far as possible we will be very sympathetic to the institution.

SRI SYDNEY A. THOMAS.—Another point I wish to bring to your notice. The third paragraph of the relevant article says:

> "Provided that at the end of ten years from the commencement of this Constitution such grants, to the extent to which they are a special concession to the Anglo-Indian community, shall cease."

It is my submission that there are several, if not dozens of schools, in Bangalore, and elsewhere in the State, which are in receipt of much higher grants. Therefore, if these grants are higher than the grants paid to the Anglo-Indian schools, these grants cannot be classed as special concessions, to the Anglo-Indian community. Then the Constitution goes on to say:

> "Provided further that no educational institution shall be entitled to receive any grant under this article unless at least forty per cent of the annual admissions therein are made available to members of communities other than the Anglo-Indian community."

The Anglo-Indian schools are not only meeting the requirement of 40 per cent, but the strength of some of the schools is sometimes 60 per cent non-Anglo-Indian. Therefore, it can in no way be called a communal school in the narrow sense of the term. These schools purvey a particular type of education based on public school lines, with great emphasis on morals, character building and discipline—the type of education which is much in demand, and which the country stands in need of today. As such, the schools are national assets. Even in the matter of teaching the Hindi language, I consider the Anglo-Indian schools to be in the vanguard. Not only in Mysore State, but throughout India, Hindi has become

a compulsory subject and the standard in that subject, I am told, is high in these schools. I would request you not to do anything either by cutting the grants, or in any other manner, reducing them or in fact do anything which might even remotely or distantly foster the discontinuance of these institutions.

Mr. SPEAKER.—Shall we take up the next cut motion ?

Sri H. C. LINGA REDDY (Malur).—We have been following a particular procedure. It is better to hurry through the cut motions. Each member who has tabled a cut motion may take a few minutes to bring the particular matter to the notice of the Hon'ble Minister.

Mr. SPEAKER.—You will be very brief in your remarks. Sri R. Anantaraman.

Propagation of Hindi.

* Sri R. ANANTARAMAN.—Hindi is a national language. Most of the people in North India speak Hindi. In South India only a few speak Hindi. To propagate Hindi the Government of India has set up a separate department and Srimathi Joshi is in charge of the department. Huge sums of money are allotted for utilisation for propagation of Hindi in all the States. But we find that our State is not able to draw the amount. We felt sorry that the money allotted last year lapsed. I request the Government to take immediate steps to see that the money is drawn and distributed among the several institutions in the State.

Grant of Schools to Malnad Parts.

* ಶ್ರೀ ಬಿ. ಎಚ್. ಬೋರಣ್ಣಗೌಡ (ಬೇಲೂರು).—ಸ್ವಾಮಿ, ಮಲೆನಾಡಿಗೆ ಪಾಠಶಾಲೆಗಳನ್ನು ಕೊಡತಕ್ಕ ವಿಚಾರದಲ್ಲಿ ನಾನು ಒಂದೆರಡು ವಿಷಯಗಳನ್ನು ಸರ್ಕಾರದವರ ಅವಗಾಹನೆಗೆ ತರಬೇಕೆಂದು ಇಷ್ಟಪಟ್ಟಿದ್ದೇನೆ. ಈ ದಿವಸ ಮೈದಾನ ಪ್ರಾಂತ್ಯದಲ್ಲಿ ಯಾರಾದರೂ ಗ್ರಾಮಸ್ಥರು ನಾವು ಸ್ಕೂಲಗಾಗಿ ಕಟ್ಟಡವನ್ನ ಕಟ್ಟಿಸಿಕೊಡುತ್ತೇವೆ ಎಂದು ಹೇಳಿದರೆ ಅಲ್ಲಿಗೆ ಸರ್ಕಾರದವರು ಸ್ಕೂಲನ್ನು ಮಂಜೂರು ಮಾಡಿ ಬಿಡುತ್ತಾರೆ. ಅದೇ ರೀತಿ ನಾವೂ ಮಲೆನಾಡಿನಲ್ಲಿ ಸರ್ಕಾರದವರು ಕೊಡತಕ್ಕ ಪ್ಲಾನಿಗೆ ಸರಿಯಾಗಿ ಕಟ್ಟಡವನ್ನು ಕಟ್ಟಿಸಿಕೊಡುತ್ತೇವೆ ಅಲ್ಲಿಗೆ ಸ್ಕೂಲನ್ನು ಕೊಡಿ ಎಂದು ಕೇಳಿದರೆ—ಆಗುವುದಿಲ್ಲ ಎಂದು ಹೇಳುತ್ತಿದ್ದಾರೆ. ಅದಕ್ಕೆ ಕಾರಣವೇನು ಹೇಳುತ್ತಿದ್ದರೆಂದರೆ' ಅಲ್ಲಿ ಪ್ರಜಾಸಂಖ್ಯೆ ಕಡಮೆ, ಹುಡುಗರಿರುವುದೂ ಕೂಡ ಕಡಮೆ, ಸ್ಕೂಲಿಗೆ ಸಾಕಷ್ಟು ಹುಡುಗರು ಬರುವುದಿಲ್ಲ, ಎಂದು ಹೇಳುತ್ತಿದ್ದರು. ಆದರೆ ಈ ದಿವಸ ಆ ಮಲೆನಾಡಿನಲ್ಲಿ ಪ್ರಜಾಸಂಖ್ಯೆ ಮೈದಾನ ಪ್ರದೇಶಕ್ಕಿಂತಲೂ ಜಾಸ್ತಿಯಾಗುತ್ತಿದೆಯೆಂಬ ಅಂಶ ಮಾನ್ಯ ಮಂತ್ರಿಗಳ ಗಮನಕ್ಕೂ ಬಂದಿದೆ; ಮತ್ತು ಮಲೆನಾಡಿನ ಸ್ಥಿತಿ ಇತ್ತೀಚೆಗೆ ಬಹಳ ಉತ್ತಮಗೊಂಡಿದೆ ಎನ್ನತಕ್ಕದ್ದು ಎಲ್ಲರ ಮಾತಾಗಿದೆ. ಈಗ ಮಲೆನಾಡಿನಲ್ಲಿ ಗ್ರಾಮದಿಂದ ಗ್ರಾಮಕ್ಕೆ ಸರಿಯಾಗಿ ರಸ್ತೆಗಳ ಸೌಕರ್ಯವಿಲ್ಲದೆ ಹೋಗಿದ್ದರೂ, 3-4 ಮೈಲಿಗಳವರೆಗೂ ಹೋಗಿ—ಎಲ್ಲಿ ಸ್ಕೂಲುಗಳಿರುತ್ತವೆಯೋ ಅಲ್ಲಿ ಆ ಬಾಲಕರುಗಳ ವಿದ್ಯಾಭಿವೃದ್ಧಿ ಹಾಗೂ ಹೀಗೂ ನಡೆಯುತ್ತಿದೆ. ಈ ದಿವಸ ಅಲ್ಲ ಯಾರು ಯಾನೋ ಪೂರ್ಣಾತ್ಮರಾಗಿರತಕ್ಕಂಥ ಪ್ಲಾಂಟರ್‌ಗಳು ಇಲ್ಲಪೇ ಗ್ರಾಮಸ್ಥರು ಮುಂದೆ ಬಂದು ನಾವು ಸರ್ಕಾರದವರು ಕೊಡತಕ್ಕ ನೇಮಗಳಿಗೆ ಸರಿಯಾಗಿ ಅವರ ಪ್ಲಾನಿಗೆ ಅನುಗುಣವಾಗಿ ಸ್ಕೂಲ್ ಕಟ್ಟಡಗಳನ್ನು ಕಟ್ಟಿಸಿ ಕೊಡುತ್ತೇವೆ' ಎಂದು ಹೇಳುತ್ತಿದ್ದಾರೆ. ಹೀಗೆ ಅವರು ಮುಂದೆ ಬಂದಿರುವಾಗಲೇ ಸರ್ಕಾರದವರು ಜಾಗ್ರತೆಯಾಗಿ ಅಲ್ಲಿಗೆ ಈ ಶಾಲೆಗಳನ್ನು ಕೊಡತಕ್ಕ ಬಗ್ಗೆ ಸೂಕ್ತ ಕಾರ್ಯಕ್ರಮಗಳನ್ನು ಕೂಡಲೇ ಕೈಗೊಳ್ಳಬೇಕೆಂದು ನಾನು ಸರ್ಕಾರದವರನ್ನು ಒತ್ತಾಯಪಡಿಸುತ್ತೇನೆ ಮತ್ತು ಅವರಲ್ಲಿ ನಾನು ಪ್ರಾರ್ಥನೆಮಾಡಿಕೊಳ್ಳುತ್ತೇನೆ.

Sri S. SRINIVASA IYENGAR.—I will speak on cut motions Nos. 80 and 83. I will finish in two or three minutes.

Mr. SPEAKER.—Only one, because there are so many other members anxious to speak.

Supernumerary Assistant Professors.

*Sri S. SRINIVASA IYENGAR.—All right Sir, For the last two years I am urging that the resolution of the University Council should be accepted by the Government. Last year Government were pleased to say that cases of these lecturers who have put in more than 20 years of service should be sympathetically considered. There was also a provision in the Budget to meet the expenditure in connection with the approval of this resolution. I do not know why the Government have not yet been able to approve the resolution. I therefore request the Government at least now to accord sanction to the resolution of the University Council. Already 3 to 4 people in the list of these lecturers who have to be given the Supernumerary Assistant Professorship, have retired and 19 to 20 have already got promotions. Now it is the problem of 10 or 20 people and

(SRI S. SRINIVASA IYENGAR.)

it would not cost the Government much. There is also a provision in the Budget for the expenditure and they can safely do it. Further in the case of aided schools, last time also I had moved the subject. The Government gives 75 per cent of the next expenditure. The institution has to give only 25 per cent of the balance. The teachers are not given the usual increments on the ground that the private institutions are unable to raise funds. The Government gives 75 per cent of the net expenditure and the institution has to give only 25 per cent. Because the institution has not been able to provide 25 per cent, the teachers in those institutions have not had the benefit of the Government's share. Government foots the bill to the extent of 75 per cent. Just because the institution has not provided the remaining 25 per cent, the Government has not granted its quota. Therefore I feel that it is necessary for the Government to extend some safeguards and some security to those who serve in these aided institutions.

MR. SPEAKER.—Cut motion No. 88,

Conscription of literates in Campaign against Illiteracy.

ಶ್ರೀ ಟಿ. ಸಿ. ಬಸಪ್ಪ (ತರೀಕೆರೆ).—ಸ್ವಾಮಿ, ನಾನು ನನ್ನ ಖೋತಾ ಸೂಚನೆಯನ್ನು ನಭೆಯ ಮುಂದೆ ಮಂಡಿಸುವುದಕ್ಕೆ ಮುಂಚಿತವಾಗಿ, ಸಂಬಂಧ ಪಟ್ಟ ಮಂತ್ರಿಗಳ ಗಮನಕ್ಕೆ ನಾನೊಂದು ಬಹಳ ಮುಖ್ಯವಾದಂಥ ವಿಚಾರವನ್ನು ತರಬೇಕೆಂದಿದ್ದೇನೆ. ನಾವು ಈ ದಿವಸ ಅನೇಕ ರೀತಿಯಾಗಿ ಅನೇಕ ಖೋತಾ ಸೂಚನೆಗಳನ್ನು ತಂದಿದ್ದೇವೆ. ಆದರೆ ಅವುಗಳನ್ನೆಲ್ಲಾ ಈಗ ಚರ್ಚೆಗೆ ತೆಗೆದುಕೊಳ್ಳಲು ಅವಕಾಶ ಎಲ್ಲದೆ ಕೈಬಿಡಲಾಗಿದೆ. ಹಾಗೆ ಅವುಗಳನ್ನು ಕೈಬಿಟ್ಟಿದ್ದರೂ ಆ ಎಲ್ಲಾ ಖೋತಾ ಸೂಚನೆಗಳ ಬಗ್ಗೆಯೂ ಸರ್ಕಾರದವರು ಸೂಕ್ತ ಕಾರ್ಯಕ್ರಮಗಳನ್ನು, ಸಹಾನುಭೂತಿಯಿಂದ ಪರಿಶೀಲಿಸಿ, ಕೈಗೊಂಡು, ಅವುಗಳನ್ನು ಕಾರ್ಯರೂಪಕ್ಕೆ ಬರುವಂತೆ ಮಾಡಬೇಕೆಂದು ತಿಳಿಸಲಿಚ್ಛಿಸುತ್ತೇನೆ.

ಈ ದಿವಸ ದೇಶದಲ್ಲಿ ಜನಗಳಿಗೆಲ್ಲ ಪ್ರಜಾಪ್ರಭುತ್ವದ ಹಕ್ಕು ಬಂದಿದೆ. ದೇಶಕ್ಕೆ ಪ್ರಜಾಪ್ರಭುತ್ವ ಬಂದಿದೆ. ಪ್ರಜಾಸರ್ಕಾರ ಚೆನ್ನಾಗಿ ದಕ್ಷತೆಯಿಂದ ಕೆಲಸ ಮಾಡಬೇಕಾಗಿದೆಯೆಂಬುದು ಬಹಳ ಮುಖ್ಯವಾದ ವಿಷಯ. ಇದಕ್ಕಾಗಿ ನಾವು ಈ ದಿವಸ ದೇಶದಲ್ಲಿರತಕ್ಕಂಥ ಪ್ರತಿಯೊಬ್ಬ ಪ್ರಜೆಯನ್ನೂ ದಕ್ಷನನ್ನಾಗಿ, ಒಳ್ಳೆಯ ಪ್ರಾಜ್ಞನನ್ನಾಗಿ ಮಾಡುವುದಕ್ಕೆ ಎಲ್ಲಾ ಪ್ರಯತ್ನಗಳನ್ನೂ ಮಾಡಬೇಕಾಗಿದೆ. ನಾವು ಈ ದಿವಸ ಒಳ್ಳೆಯ ರಾಜಕೀಯ ಪ್ರತಿನಿಧಿಗಳನ್ನು ತಯಾರುಮಾಡಬೇಕಾಗಿದೆ. ಅವರು ರಾಜಕೀಯದಲ್ಲಿ ಮುಂದೆ ಬಂದು ದೇಶಕ್ಕೆ ಒಳ್ಳೆಯದಾದಂಥ ಮತ್ತು ಕಲ್ಯಾಣಪ್ರಾಗತಕ್ಕಂಥ ನಲಹೆಗಳನ್ನು ಕೊಡತಕ್ಕಂಥ ರೀತಿಯಲ್ಲಿ ದೇಶದ ಜನರನ್ನು ಸರ್ಕಾರ ವಿದ್ಯಾವಂತರನ್ನಾಗಿ ಮಾಡ ಬೇಕಾಗಿದೆ. ಈ ದಿವಸ ನಮ್ಮ ಕೆಲಸ ಕಾರ್ಯಗಳು ಸುಲಲಿತವಾಗಿ ಆಗದಿರುವುದಕ್ಕೆ ಮುಖ್ಯ ಕಾರಣ ಜನರು ಅವಿದ್ಯಾವಂತರಾಗಿರುವುದೇ ಆಗಿದೆ.—ಇದು ಈ ದಿವಸ ನಮ್ಮ ಕೆಲಸಕಾರ್ಯಗಳಿಗೆಲ್ಲಾ ಒಂದು ದೊಡ್ಡ ಪೆಡಂಭೂತವಾಗಿ ನಿಂತುಕೊಂಡಿದೆ. ಇದನ್ನು ತೊಲಗಿಸತಕ್ಕ ಬಗ್ಗೆ ನಮ್ಮ ಸರ್ಕಾರದವರು ರಷ್ಯಾ ಮತ್ತು ಚೈನಾ ದೇಶಗಳವರು ಈ ಬಗ್ಗೆ ಯಾವ ರೀತಿ ಒಂದು ಯೋಜನೆಯನ್ನು ಹಾಕಿಕೊಂಡು ಕೆಲಸ ಸಾಧಿಸಿದರೋ ಅದೇ ರೀತಿಯಲ್ಲಿ ನಮ್ಮ ದೇಶದ ಜನರನ್ನು ವಿದ್ಯಾವಂತರನ್ನಾಗಿ ಮಾಡು ವುದಕ್ಕೆ ಒಂದು ನಿರ್ದಿಷ್ಟವಾದ ಯೋಜನೆಯನ್ನು ಹಾಕಿಕೊಂಡು ಮಾಡತಕ್ಕದ್ದು ಬಹಳ ಒಳ್ಳೆಯ ದೆಂದು ಹೇಳುತ್ತೇನೆ. ನಮ್ಮ ಈ ಗ್ರಾಮಾಭಿವೃದ್ಧಿ ಇತ್ಯಾದಿ ಯಾವ ಕೆಲಸಕಾರ್ಯಗಳ ಆಗಬೇಕಾಗಿ ದ್ದರೂ ಮೊದಲು ನಾವು ಜನರನ್ನು ವಿದ್ಯಾವಂತರ ನ್ನಾಗಿ ಮಾಡಬೇಕು. ಜನರು ವಿದ್ಯಾವಂತರಾಗದೆ ಹೋದರೆ ನಮ್ಮ ಉಳಿದ ಪ್ರತಿಯೊಂದು ಕೆಲಸಕಾರ್ಯ ಗಳೂ ನಿಷ್ಪಲವಾದಂತೆಯೇ. ಇಷ್ಟೇ ಅಲ್ಲದೆ ನಮ್ಮ ದೇಶದ ಸ್ವಾತಂತ್ರ್ಯವನ್ನು ಕೂಡ ಕಾಪಾಡಿ ಕೊಳ್ಳುವುದಕ್ಕೆ ಬಹಳ ಕಷ್ಟವಾಗುತ್ತದೆ—1931ರಲ್ಲಿ ನಮ್ಮ ದೇಶದಲ್ಲಿ ವಿದ್ಯಾವಂತರ ಸಂಖ್ಯೆ ಶೇಕಡ 10 ಇತ್ತು, 1941ರಲ್ಲಿ ಈ ವಿದ್ಯಾವಂತರ ಸಂಖ್ಯೆ ಶೇಕಡ 13ಕ್ಕೆ ಏರಿತು. ಹತ್ತು ವರ್ಷಗಳು ಕಳೆದನಂತರ ನಮ್ಮ ದೇಶದ ವಿದ್ಯಾವಂತರ ಸಂಖ್ಯೆಯಲ್ಲಿ ಶೇಕಡ ಮೂರರಷ್ಟು ಜಾಸ್ತಿ ಆಯಿತು. ಈ ದಾಮಾಷ ಪ್ರಕಾರ ನಮ್ಮ ದೇಶದಲ್ಲಿರತಕ್ಕಂಥ ಜನರನ್ನೆಲ್ಲಾ ವಿದ್ಯಾವಂತರನ್ನಾಗಿ ಮಾಡಬೇಕಾದರೆ ನಮಗೆ ಕನಿಷ್ಟ ಪಕ್ಷ 250 ವರ್ಷಗಳು ಹಿಡಿಯುತ್ತದೆ. ಈಗಿನ ಸೆನ್ಸಸ್ ಪ್ರಕಾರ ನಮ್ಮ ದೇಶದಲ್ಲಿರತಕ್ಕ ವಿದ್ಯಾವಂತರ ಸಂಖ್ಯೆ ಶೇಕಡ 20·6 ಇದೆಯೆಂದು ಗೊತ್ತಾಗಿದೆ. ಹಿಂದಿನ ಹತ್ತು ವರ್ಷಗಳಲ್ಲಿ ನಮ್ಮ ದೇಶದಲ್ಲಿ 100 ಜನರಿಗೆ 7 ಜನರು ಹೆಚ್ಚಿಗೆ ವಿದ್ಯಾವಂತರಾಗಿರುತ್ತಾರೆ. ಇದರ ಪ್ರಕಾರ ಲೆಕ್ಕ ಹಾಕಿದರೆ ನಮ್ಮ ದೇಶದ ಜನರನ್ನು ವಿದ್ಯಾವಂತ ರನ್ನಾಗಿ ಮಾಡುವುದಕ್ಕೆ 150 ವರ್ಷಗಳಾದರೂ ಬೇಕಾಗುತ್ತದೆ. ಇದನ್ನೆಲ್ಲಾ ಲೆಕ್ಕಹಾಕಿ ನೋಡಿದರೆ ನಮ್ಮ ಸರ್ಕಾರ ವಿದ್ಯಾಭ್ಯಾಸದ ಬಗ್ಗೆ ಅಷ್ಟು ಗಮನ ವನ್ನು ಕೊಡುತ್ತಿಲ್ಲವೆಂದು ಕಾಣುತ್ತದೆ. ಈಗಲಾದರೂ ಸರ್ಕಾರದವರು ಈ ಬಗ್ಗೆ ಒಂದು ನಿರ್ದಿಷ್ಟವಾದ ಯೋಜನೆಯನ್ನು ಹಾಕಿಕೊಳ್ಳಬೇಕು. ಇದಕ್ಕೆ ನಾನೊಂದು ನಲಹೆ ಮಾಡುತ್ತೇನೆ. ಈಗ ನಮ್ಮ ದೇಶದಲ್ಲಿ ಒಂದು ಲಕ್ಷ ಜನರು ವಿದ್ಯಾವಂತರನ್ನಾರಿಸಿಕೊಳ್ಳೋಣ. ಇವರೆಲ್ಲರೂ ಕಡ್ಡಾಯವಾಗಿ ಆರು ತಿಂಗಳ ಅವಧಿಯಲ್ಲಿ ಹತ್ತು ಜನರನ್ನಾದರೂ ವಿದ್ಯಾವಂತರನ್ನಾಗಿ ಮಾಡಲೇಬೇಕೆಂಬ ಒಂದು ನಿರ್ಬಂಧವನ್ನು ಹಾಕಿದರೆ ಆಗ ನಾವು ದೇಶದಲ್ಲಿರತಕ್ಕಂಥ ಜನರನ್ನೆಲ್ಲಾ ವಿದ್ಯಾವಂತರನ್ನಾಗಿ ಮಾಡುವುದಕ್ಕೆ ಅವಕಾಶವಾಗುತ್ತದೆ. ಇಲ್ಲದಿದ್ದರೆ ಇದು ಖಂಡಿತ ಆಗುವುದಿಲ್ಲ. ಅಂತೂ ಈ ರೀತಿಯಾಗಿ ಒಂದು ಯೋಜನೆಯನ್ನು ಹಾಕಿಕೊಳ್ಳಲೇ ಬೇಕು. ಈ ರೀತಿ ಮಾಡುವುದಕ್ಕೂ ಕೂಡ ಸ್ವಲ್ಪ ಹಣ ಬೇಕಾಗಬಹುದು. ತಿಂಗಳಿಗೆ ಒಬ್ಬೊಬ್ಬರಿಗೆ 20 ರೂಪಾ ಯಿಗಳನ್ನು ಕೊಡಬೇಕಾಗಿ ಬರಬಹುದು. ಚಿಂತೆಯಿಲ್ಲ ಕೊಡಿ. ಎಲ್ಲ ಸುಧಾರಣೆಗಳನ್ನು ಜಾರಿಗೆತರುವುದರಲ್ಲಿ

ಕಷ್ಟವಿದೆ. ಕಷ್ಟವಿಲ್ಲದೆ ಯಾವ ಕೆಲಸವೂ ಆಗುವುದಿಲ್ಲ. ತಾವು ಈ ಒಂದು ಯೋಜನೆಯ ಪ್ರಕಾರ ಈ ಕಾರ್ಯವನ್ನು ಕೈಗೊಂಡರೆ ಒಂದು ವರ್ಷದಲ್ಲಿ ಒಬ್ಬೊಬ್ಬ ವಿದ್ಯಾವಂತರೂ 20 ಜನರನ್ನು ವಿದ್ಯಾವಂತರನ್ನಾಗಿ ಮಾಡಬಹುದು. ಹೀಗೆ ಮೂರು-ನಾಲ್ಕು ವರ್ಷಗಳಲ್ಲಿ ದೇಶದಲ್ಲಿರತಕ್ಕಂಥವರೆಲ್ಲರನ್ನೂ ವಿದ್ಯಾವಂತರನ್ನಾಗಿ ಮಾಡಬಹುದು. ಹೀಗೆ ಮಾಡಿದರೆ 100ಕ್ಕೆ 100 ಜನರನ್ನು ವಿದ್ಯಾವಂತರನ್ನಾಗಿ ಮಾಡದೆ ಹೋದರೂ 100ಕ್ಕೆ 80 ಜನರನ್ನಾದರೂ ವಿದ್ಯಾವಂತರನ್ನಾಗಿ ಮಾಡಬಹುದು, ಎಂದು ನನಗೆ ಅನಿಸುತ್ತಿದೆ. ಈಗ ನಾವು ಈ ವಿದ್ಯಾಭ್ಯಾಸಕ್ಕಾಗಿ 2-2½ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ. ನಾವು ಜನರನ್ನು ವಿದ್ಯಾವಂತರನ್ನಾಗಿ ಮಾಡದೆ ಸುಮ್ಮನೆ ಕೋಟ್ಯಂತರ ಗಟ್ಟಲೆ ಈ ನೀರಾವರಿ ಯೋಜನೆಗಳಿಗೂ, ಕೈಗಾರಿಕಾ ಯೋಜನೆಗಳಿಗೂ ಖರ್ಚು ಮಾಡಿದರೆ ದೇಶಾಭಿವೃದ್ಧಿಯಾಗುವುದಿಲ್ಲ. ಈ ಬಗ್ಗೆ ಸರ್ಕಾರದವರು ದೀರ್ಘವಾಗಿ ಆಲೋಚನೆ ಮಾಡಬೇಕೆಂದು ನಾನು ಸರ್ಕಾರದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

Backward Community Scholarships.

ಶ್ರೀ ಜಿ. ಎ. ತಿಮ್ಮಪ್ಪಗೌಡ (ಅರಕಲಗೂಡು).—ಸ್ವಾಮಿ, ಈಗ ನನ್ನ ಮಿತ್ರರಾದ ಶ್ರೀಮಾನ್ ಟಿ. ಸಿ. ಬಸಪ್ಪನವರು ಹೇಳಿದ, ಹಾಗೆ, ಮೊದಲು ಎಲ್ಲ ಮಕ್ಕಳೂ ವಿದ್ಯಾವಂತರಾಗುವುದು ಅತ್ಯಗತ್ಯ. ಇದಕ್ಕೆ ಪ್ರೈಮರಿ ಸ್ಕೂಲು ವಿದ್ಯಾಭ್ಯಾಸಕ್ಕೆ ಹೆಚ್ಚು ಅನುಕೂಲಗಳನ್ನು ಸರ್ಕಾರದವರು ಮಾಡಿಕೊಡಬೇಕಾಗಿದೆ. ಪ್ರತಿ ಗ್ರಾಮಕ್ಕೂ ಸ್ಕೂಲನ್ನು ಕೊಡಬೇಕಾಗಿದೆ. ಖರ್ಚಿನ ವಿಷಯವನ್ನು ಹೇಳುವುದಾದರೆ, ಸರ್ಕಾರದವರು ಈಗ ಸಂಸ್ಕೃತಿ ಪ್ರಚಾರ, ವಯಸ್ಕರ ವಿದ್ಯಾಭ್ಯಾಸ, ಸ್ಕೌಟ್, ಸೇವಾದಳ ಇವಕ್ಕೆಲ್ಲಾ ಹಣಕೊಡುತ್ತಿದ್ದಾರೆ. ಕೊಡಬೇಡಿ ಎಂದು ಹೇಳುವುದಿಲ್ಲ, ಆದರೆ ಯಾವುದಕ್ಕೆ top priority ಕೊಡಬೇಕೊ ಅದಕ್ಕೆ ಕೊಡದೆ, 'ಹೊಚ್ಚೆಗೆ ಹಿಟ್ಟಿಲ್ಲ,ಜುಟ್ಟಿಗೆ ಮಲ್ಲಿಗೆ ಹೂವು' ಎನ್ನುವ ಹಾಗಾಗಬಾರದು. ಮೊದಲು ಅತ್ಯಾವಶ್ಯಕವಾದ ಬಾಬುಗಳಿಗೆ ಹಣಕೊಟ್ಟ ಮೇಲೆ ಉಳಿದ ಹಣವನ್ನು ಏನು ಮಾಡಿದರೂ, ಹೇಗೆ ಖರ್ಚುಮಾಡಿದರೂ ಚಿಂತೆಯಿಲ್ಲ. ನನ್ನ ಖಚಿತ ನಿರ್ಣಯ ಸ್ಪಷ್ಟವಾಗಿದೆ. ಹಿಂದುಳಿದ ಕೋಮಿನ ವಿದ್ಯಾರ್ಥಿವೇತನಗಳನ್ನು ಕೊಡುವ ವಿಚಾರಕ್ಕೆ ಸಂಬಂಧಪಟ್ಟದ್ದು. ಕಳೆದ ಐದಾರು ವರ್ಷಗಳಿಂದ ಬಜೆಟ್ ನೋಡಿದರೆ, ಹಿಂದುಳಿದ ಕೋಮಿನ ವಿದ್ಯಾರ್ಥಿಗಳಿಗೆ ಕೊಡುತ್ತಿರುವ ವೇತನದ ಮೊಬಲಗು ಒಂದೇ ರೀತಿ ಇದೆ. ಈ ವರ್ಷ 2,24,989 ರೂಪಾಯಿ ಒದಗಿಸಲಾಗಿದೆ; ಹೋದ ವರ್ಷವೂ ಇಷ್ಟೆ, ಐದಾರು ವರ್ಷಗಳಿಂದಲೂ ಇಷ್ಟೆ, ಆದರೆ ವಿದ್ಯಾರ್ಥಿಗಳ ಸಂಖ್ಯೆ ದ್ವಿಗುಣವಾಗಿದೆ ಅಥವಾ ತ್ರಿಗುಣವಾಗಿದೆ ಎಂಬುದು ಗೊತ್ತೇ ಇದೆ. ಇದರಿಂದ ವಿದ್ಯಾರ್ಥಿಗಳಲ್ಲಿ ಅತೃಪ್ತಿ ಹೆಚ್ಚುವುದಕ್ಕೆ ಕಾರಣವಾಗಿದೆ. ನಾನು ವೇತನ ಸಮಿತಿಯ ಸದಸ್ಯನಾಗಿ ಇದರಲ್ಲಿರುವ ಕಷ್ಟವನ್ನು ತಿಳಿದವನಾಗಿದ್ದೇನೆ. ಗ್ರಾಮಾಂತರಗಳಿಂದ ಬರುವ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗಿರುವುದರಿಂದ ಇರುವ ವೇತನಗಳನ್ನು ಹಂಚುವುದು ನಮಗೆ ಬಹಳ ಕಷ್ಟವಾಗಿದೆ. ಆ ಸಮಿತಿಗಳಲ್ಲಿದ್ದು ಆ ರೀತಿ ಹಂಚುವುದಕ್ಕಿಂತ ಅಲ್ಲಿಲ್ಲದೇ ಇರುವುದು ಒಳ್ಳೆಯದು ಎನಿಸುತ್ತದೆ. ನ್ಯಾಯವಾಗಿ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಿದ ಹಾಗೆ ವೇತನಗಳ ಸಂಖ್ಯೆಯನ್ನೂ ಹೆಚ್ಚಿಸಬೇಕು. ಬಡವರಿಗೆ ಸಹಾಯ ಮಾಡಬೇಕೆಂಬ ಆಶೆ ಸರ್ಕಾರಕ್ಕಿದ್ದರೆ ಈ ವರ್ಷ ಖಂಡಿತವಾಗಿ ಹೆಚ್ಚು ಮೊಬಲಗನ್ನು ಒದಗಿಸಲೇ ಬೇಕಾಗಿದೆ. ಹಾಗೆ ಮಾಡಬೇಕೆಂದು ಸರ್ಕಾರದವರನ್ನು ಪ್ರಾರ್ಥಿಸುತ್ತೇನೆ.

Encouragement to Scout Movement.

ಶ್ರೀ ಎ. ವಿ. ನರಸಿಂಹರೆಡ್ಡಿ (ಬೆಂಗಳೂರು ದಕ್ಷಿಣ).—ಸ್ವಾಮಿ, ನಮ್ಮ ಸರ್ಕಾರದವರು ಸೇವಾದಳ, ಸ್ಕೌಟ್, ವಯಸ್ಕರ ಶಿಕ್ಷಣ ಸಮಿತಿ ಮುಂತಾದ ಅನೇಕ ಸಂಸ್ಥೆಗಳಿಗೆ ಧನ ಸಹಾಯವನ್ನು ಪ್ರತಿ ವರ್ಷವೂ ಒದಗಿಸುತ್ತಿದ್ದಾರೆ. ಸ್ಕೌಟ್ ಚಳವಳಿ ಬರೀ ಪ್ರಾಂತ ಸರ್ಕಾರಕ್ಕೆ ಸಂಬಂಧಪಟ್ಟದ್ದಲ್ಲ, ಇಡೀ ಪ್ರಪಂಚಕ್ಕೇ ಸಂಬಂಧಪಟ್ಟ ಸಂಸ್ಥೆ. ಆದಕಾರಣ ಇದಕ್ಕಾಗಿ ಹೆಚ್ಚಿನ ಗ್ರಾಂಟು ಒದಗಿಸುತ್ತಿದ್ದಾರೆ. ಸ್ಕೌಟ್ ದಳದವರು ಅನೇಕ ಉಪಯುಕ್ತ ಕಾರ್ಯಗಳನ್ನು ಮಾಡುತ್ತಿದ್ದಾರೆ. ಭಾರತ ಸೇವಾದಳದವರು ಮೊದಲು ಮೈಸೂರು ಕಾಂಗ್ರೆಸ್ ಸಂಸ್ಥೆಯ ಅಂಗವಾಗಿ ಅದನ್ನು ಪ್ರಾರಂಭಮಾಡಿ, ಈಗ ಭಾರತ ಸೇವಾದಳವೆಂದು ಮಾಡಿಕೊಂಡಿದ್ದಾರೆ. ಸರ್ಕಾರದವರು ಇದಕ್ಕೂ ಸಹಾಯವನ್ನು ನೀಡುತ್ತಾ ಬೆಳೆಸುತ್ತಿದ್ದಾರೆ. ಇವೆರಡರ ಜೊತೆಗೆ ವಯಸ್ಕರ ಶಿಕ್ಷಣ ಸಮಿತಿಗೂ ಧನ ಸಹಾಯವನ್ನೊದಗಿಸುತ್ತಿದ್ದಾರೆ. ಇದರ ಕಾರ್ಯದ ವಿಚಾರವನ್ನು ಅನೇಕರು ಹೇಳಿದ್ದಾರೆ, ನಾನು ಪ್ರಸ್ತಾಪಮಾಡುವುದಿಲ್ಲ. ಮುಖ್ಯವಾಗಿ ನಮ್ಮ ವಿದ್ಯಾಸಂಸ್ಥೆಗಳಲ್ಲಿ ಈ ಎರಡು ದಳಗಳವರೂ ಕೆಲಸ ಮಾಡುತ್ತಿರುವುದರಿಂದ ವಿದ್ಯಾರ್ಥಿಗಳಲ್ಲಿ ಅಶಿಸ್ತಿಗೂ, ಘರ್ಷಣೆಗೂ ಅವಕಾಶವಾಗಿದೆ ಎಂದು ಹೇಳಿದರೆ ತಪ್ಪಲ್ಲ. ಈ ಎರಡು ಸಂಸ್ಥೆಗಳೂ ಎರಡು ಮುಖವಾಗಿ ಬೆಳೆದುಕೊಂಡು ಹೋಗುವುದಕ್ಕೆ ಅವಕಾಶ ಕೊಡುವುದರಿಂದ ತೊಂದರೆಯಾಗುತ್ತದೆ. ಇವೆರಡನ್ನೂ ಒಟ್ಟುಗೂಡಿಸಬೇಕು. ಇಡೀ ಇಂಡಿಯಾ ದೇಶಕ್ಕೆ ಸಂಬಂಧಪಟ್ಟ ಹಾಗಿರುವ ಸ್ಕೌಟ್ ದಳಕ್ಕೆ ರಾಜಕೀಯ ಗೊಂದಲವೇ ಇಲ್ಲ. ಇದಕ್ಕೆ ಬೇರೆ ಚಟಪಟಿಕೆಗಳಿಲ್ಲ. ಬರಿಯ ಜನರ ಸೇವೆ ಮಾಡುವುದೇ ಇದರ ಆದರ್ಶ. ಈ ದೃಷ್ಟಿಯಿಂದ ಸ್ಕೌಟ್ ಚಳವಳಿಗೆ ಹೆಚ್ಚಿನ ಪ್ರಾಶಸ್ತ್ಯಕೊಡುವುದು ಅತ್ಯಗತ್ಯವೆಂದು ಹೇಳಬೇಕಾಗಿದೆ.

ಇದೇ ಸಮಯದಲ್ಲಿ ಇನ್ನೊಂದು ವಿಚಾರ ಹೇಳಬೇಕಾಗಿದೆ. ಸಾರ್ವಜನಿಕರ ವಿದ್ಯಾರ್ಥಿನಿಲಯಗಳನ್ನು ಕಟ್ಟುವುದಕ್ಕೆ ಈ ವರ್ಷ ಐದು ಲಕ್ಷ ರೂಪಾಯಿ ಒದಗಿಸಿದ್ದಾರೆ. ನನ್ನ ಅಭಿಪ್ರಾಯದಲ್ಲಿ ಈ ಹಣದ ಬಹು ಭಾಗ ಹಳ್ಳಿಗಳಲ್ಲಿ ಖರ್ಚಾಗಬೇಕು. ಕಾರಣ ವೇನೆಂದರೆ, ಜಾತಿಗಳ ವಿಷಯವನ್ನು ವಿದ್ಯಾವಂತರು ಹೆಚ್ಚು ಮನಸ್ಸಿನಲ್ಲಿಟ್ಟುಕೊಳ್ಳುವುದಿಲ್ಲ. ಅನ್ಯೋನ್ಯತೆಯಿಂದ, ಪ್ರೀತಿಯಿಂದ ನೋಡುತ್ತಾರೆ. ಆದರೆ, ಅವಿದ್ಯಾವಂತರಲ್ಲಿ ಹೆಚ್ಚಾಗಿದೆ. ಅಲ್ಲಿ ಅನೇಕ ಜನರು ಒಟ್ಟಾಗಿ ಬೆಳೆಯುವುದಕ್ಕೆ ತಕ್ಕ ವಾತಾವರಣವೇರ್ಪಡಬೇಕು. . . .

ಶ್ರೀ ಡಿ. ದೇವರಾಜ ಅರಸ್.—ಕೋಮುವಾರು ಭಾವನೆ ಹೆಚ್ಚಾಗಿರುವುದು ವಿದ್ಯಾವಂತರಲ್ಲೇ; ಅವಿದ್ಯಾವಂತರಲ್ಲಿ ಹೆಚ್ಚಾಗಿಲ್ಲ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಆದುದರಿಂದ ನಣ್ಣ ನಣ್ಣ ಸ್ಕೂಲುಗಳಿರುವ ಸ್ಥಳಗಳಲ್ಲಿ, ಹಳ್ಳಿಗಳಲ್ಲಿ ಸಾರ್ವಜನಿಕ ವಿದ್ಯಾರ್ಥಿನಿಲಯಗಳನ್ನು ಕಟ್ಟುವುದಕ್ಕೆ ಹೆಚ್ಚು ಹಣವನ್ನು ವಿನಿಯೋಗ ಮಾಡಬೇಕೆಂದು ಹೇಳುತ್ತೇನೆ.

(ಶ್ರೀ ಎ. ವಿ. ನರಸಿಂಹರೆಡ್ಡಿ.)

ಇಷ್ಟು ಹೇಳಿ ಈ ಖೋತಾ ನಿರ್ಣಯವನ್ನು ಒತ್ತಾಯ ಮಾಡುತ್ತೇನೆ.

Sri H. C. LINGA REDDY (Malur).—Sir, I will speak on two cut motions, Nos. 110 and 112.

Mr. SPEAKER.—You may speak on one of the two.

Colleges at District Headquarters.

Sri H. C. LINGA REDY.—In supporting cut motion No. 110, I would like to say a few words. In the reforms that our State has introduced, we do not know what exactly will happen to the Intermediate Colleges. The High School will have one more year and the Degree Course will have another year, which means that the Intermediate Colleges will have to disappear under the new rules. Therefore, Sir, it is very necessary that there should be First Grade Colleges at District Headquarters. Our University has already been making some efforts in this direction and they have already decided to give three First Grade Colleges at three district headquarters. I do not know if they have come into being; I believe they have not yet. I also understand that at a recent conference of the Vice-Chancellors it was very strongly felt that, before the new Reforms are introduced, it is very necessary that these colleges—Intermediate Colleges—have to be upgraded. We have already a two-year course and if one more year is to be added on, I think it will become a three-year course. In some places there is accommodation. Wherever there is no accommodation, accommodation may be made available. I understand that the cost will be about ten lakhs of rupees, at which rate they will be in a position to give First Grade Colleges to all the districts in the State.

With regard to the cut motion, No. 112—Text-books, we have introduced reforms already. But in the Primary and High Schools, we do not have the necessary text-books. This serious difficulty felt by the students, I hope, Government will remove very early.

Mr. SPEAKER.—Sri T. G. Thimme Gowda, cut motion No. 114.

High School Building at Tiptur

(*Extension.*)

*ಶ್ರೀ ಟಿ. ಜಿ. ತಿಮ್ಮೇಗೌಡ (ತಿಪಟೂರು).—ಸ್ವಾಮಿ, ತಿಪಟೂರು ಹೈಸ್ಕೂಲಿನಲ್ಲಿ 600 ಜನ ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಈಗ ಅಲ್ಲಿ ಸಾಕಷ್ಟು ಸ್ಥಳ ವಸತಿ ಇಲ್ಲ. ಈ ವಿಷಯದಲ್ಲಿ ಅನೇಕ ಸಾರಿ ಸರ್ಕಾರದಲ್ಲಿ ಮನವಿ ಮಾಡಿದ್ದಾಯಿತು. ಹೋದ ವರ್ಷ ಒಂದು ಉಪಪ್ರಶ್ನೆಗೆ ಉತ್ತರ ಕೊಡುತ್ತಾ ಮಾನ್ಯ ಮಂತ್ರಿಗಳು 'ಆ ಕಟ್ಟಡಕ್ಕೆ ಅಂದಾಜು ತಯಾರಾಗುತ್ತಿದೆ, ಕೂಡಲೆ ಕಟ್ಟಡ ಕಟ್ಟಿಸುತ್ತೇವೆ' ಎಂದು ಭರವಸೆ ಕೊಟ್ಟರು. ಆದರೆ ಇದುವರೆಗೆ ಆಗಿಲ್ಲ. ಇದರಿಂದ ಅಲ್ಲಿನ ಹೈಸ್ಕೂಲು ವಿದ್ಯಾರ್ಥಿಗಳಿಗೆ ಸ್ಥಳವಸತಿ ಸಾಕಾಗದೆ ಬಹಳ ತೊಂದರೆಯಾಗುತ್ತಿದೆ. ಇದನ್ನು ನಿವಾರಿಸಲು ಆ ಕಟ್ಟಡವನ್ನು ಜಾಗ್ರತೆ ಬಡಾವಣೆ ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

ಎರಡನೆಯದಾಗಿ, ಅಲ್ಲಿ ಟೈಪ್‌ರೈಟಿಂಗ್ ಯಂತ್ರಗಳು ಆರು ಮಾತ್ರ ಇವೆ, ಇದು ಸಾಲದು. ಆದುದರಿಂದ 25ರವರೆಗೆ ಜಾಸ್ತಿ ಮಾಡಬೇಕೆಂದು ಮನವಿ ಮಾಡುತ್ತೇನೆ.

Primary Education of Depressed Class Students.

*ಶ್ರೀ ಜಿ. ದುಗ್ಗಪ್ಪ (ಹೊಳಲಕೆರೆ—ಅನುಸೂಚಿತ ಜಾತಿಗಳು).—ಸ್ವಾಮಿ, ನನ್ನ ಖೋತಾ ನಿರ್ಣಯದ ಉದ್ದೇಶವಿಷ್ಟು: ಹೈಸ್ಕೂಲು ವಿದ್ಯಾಭ್ಯಾಸಕ್ಕೆ ಹೆಚ್ಚು ಪ್ರಾಶಸ್ತ್ಯ ಕೊಡಬೇಕು, ಈ ಬಗ್ಗೆ ಕೊಡುತ್ತಿರುವ ಗಮನ ಸಾಲದು. ಅದರಲ್ಲಿಯೂ ಕೈಗಾರಿಕೆ ಕೇಂದ್ರಗಳು ಹೆಚ್ಚಾಗಿರತಕ್ಕ ಸ್ಥಳಗಳಲ್ಲಿ, ಬೆಂಗಳೂರು, ದಾವಣಗೆರೆ ಮುಂತಾದ ಸ್ಥಳಗಳಲ್ಲಿ ಹರಿಜನರ ಮಕ್ಕಳು ಸ್ಕೂಲುಗಳಿಗೆ ಹೋಗುವುದು ಕಡಮೆಯಾಗುತ್ತಿದೆ. ಏಕೆಂದರೆ ಸಣ್ಣ ಸಣ್ಣ ಹುಡುಗರನ್ನು ಸ್ಕೂಲುಗಳಿಗೆ ಕಳುಹಿಸಿದೆ ಇತರ ಕಾರ್ಖಾನೆಗಳಿಗೆ ಕಳುಹಿಸಿದರೆ ಸುಲಭವಾಗಿ ಕೆಲಸ ಸಿಕ್ಕುವುದರಿಂದ ಅಲ್ಲಿಗೇ ಕಳುಹಿಸುತ್ತಾರೆ. ಆದುದರಿಂದ ಹೊದಲಗಿಂತ ಈಗ ಸ್ಕೂಲಿಗೆ ಹೋಗುವ ವಿದ್ಯಾರ್ಥಿಗಳ ಸಂಖ್ಯೆ ಕಡಮೆಯಾಗಿದೆ. ತಂದೆ ತಾಯಿಗಳಿಗೆ ಸುಲಭವಾಗಿ ಮಕ್ಕಳಿಂದ ಉತ್ಪತ್ತಿ ಬರುತ್ತದೆ. ಈ ರೀತಿ ಅಲ್ಪ ಸ್ವಲ್ಪ ಸಂಪಾದನೆಯನ್ನು ಹುಡುಗರು ತರುವುದರಿಂದ ಹೈಸ್ಕೂಲು ಶಾಲೆಗಳಿಗೆ ಹೋಗುವ ಹುಡುಗರ ಸಂಖ್ಯೆ ಕಡಮೆಯಾಗುತ್ತಿದೆ. ಇದರಿಂದ ಮಿಡ್ಲ್ ಸ್ಕೂಲು, ಹೈಸ್ಕೂಲು ಮತ್ತು ಕಾಲೇಜುಗಳಲ್ಲಿಯೂ ಹರಿಜನ ವಿದ್ಯಾರ್ಥಿಗಳ ಸಂಖ್ಯೆ ಕಡಮೆಯಾಗಿದೆ. ಉದಾಹರಣೆಗೆ ಬೆಂಗಳೂರಿನಲ್ಲಿ ಹರಿಜನರಲ್ಲಿ ವಿಶ್ವವಿದ್ಯಾನಿಲಯದ ಮಟ್ಟಕ್ಕೆ ಬರುವವರು ಹೆಚ್ಚು ಕಡಮೆ ಇಲ್ಲವೇ ಇಲ್ಲವೆಂದು ಹೇಳಬಹುದು. ಕೈಗಾರಿಕೆಗಳು ಹೆಚ್ಚಾಗಿರುವ ಸ್ಥಳಗಳಲ್ಲಿ ಈ ರೀತಿ ಇದೆ. ಆದುದರಿಂದ ಸರ್ಕಾರದವರು ಹಿಂದುಳಿದ ಕೋಮುಗಳಿಗೆ ಹಣವನ್ನು ನಿಗದಿ ಮಾಡುವಾಗ, ಪ್ರೈಮರಿ ವಿದ್ಯಾಭ್ಯಾಸದ ಆವಶ್ಯಕತೆಯನ್ನು ಅರಿತು ಇದಕ್ಕೆ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಅಲ್ಲದೆ ವೇತನಗಳ ಪೊಬಲಗನ್ನು ವಿಲೇವಾರಿ ಮಾಡುವಾಗ ಯಾವುದೋ ಕಾರಣದಿಂದ ಯಾವುದೋ ಒಂದು ಜಿಲ್ಲೆಗೆ ಜಾಸ್ತಿ ಕೊಟ್ಟು ಇನ್ನೊಂದಕ್ಕೆ ಕಡಮೆಯಾಗುತ್ತಿದೆ. ನಾನು ಎರಡು ಮೂರು ವರ್ಷಗಳಿಂದಲೂ ನೋಡುತ್ತಿದ್ದೇನೆ. ಈ ವರ್ಷ, ಹೋದವರ್ಷ, ಅದರ ಹಿಂದಿನ ವರ್ಷ ಏನಾಗಿದೆ

ನೋಡಿ. ದಾಮಾಷ ಪ್ರಕಾರ ಲೆಕ್ಕ ಹಾಕಿದರೆ, ಕೋಲಾರ ಮುಂತಾದ ಜಿಲ್ಲೆಗಳಿಗೆ ಹೆಚ್ಚು ಹೋಗಿರುತ್ತದೆ. ಚಿತ್ರದುರ್ಗ ಜಿಲ್ಲೆಗೆ ನ್ಯಾಯವಾಗಿ ಹೆಚ್ಚಾಗಿ ದೊರೆಯಬೇಕು. ಈ ಜಿಲ್ಲೆಯೇ ಮೊದಲನೆಯದು. . . .

Sri K. PATTABHIRAMAN (Kolar).—It is not correct.

Sri G. DUGGAPPA.—In Kolar, the number of school going boys may be higher. ಜನ ಸಂಖ್ಯೆಯ ಆಧಾರದಮೇಲೆ ಲೆಕ್ಕ ಹಾಕಬೇಕು. Let there be equitable distribution. ಅಲ್ಲದೆ, ಇಂಡಿಯಾ ಸರ್ಕಾರದ ವಿದ್ಯಾರ್ಥಿವೇತನಗಳು ನಮ್ಮ ಹುಡುಗರಿಗೆ ಹೆಚ್ಚು ಹೆಚ್ಚಾಗಿ ಸಿಕ್ಕುತ್ತಿರುವುದರಿಂದ ಮೈಸೂರು ಸರ್ಕಾರದ ವೇತನಗಳಲ್ಲಿ ಉಳಿತಾಯವಾಗುತ್ತಿದೆ. ಹೀಗೆ ಉಳಿತಾಯವಾಗದೇ ಇರುವ ಹಾಗೆ ನೋಡಿಕೊಳ್ಳಬೇಕು. ಒಂದುಸಾರಿ 40 ಸಾವಿರ ರೂಪಾಯಿ ವಿಶ್ವವಿದ್ಯಾನಿಲಯದ ಮಟ್ಟದಲ್ಲಿ ಉಳಿತಾಯವಾಯಿತೆಂದು ಕೇಳಿದ್ದೇನೆ. ಇಂಡಿಯಾ ಸರ್ಕಾರದ ವೇತನ ಬಂದರೆ ಅವರಿಗೆ ಮೈಸೂರು ಸರ್ಕಾರದ ವೇತನಗಳನ್ನು ಕೊಡುವುದಿಲ್ಲ. ಈ ರೀತಿ lapse ಆಗದಿರುವಂತೆ ಮಾಡಬೇಕು ಚಿತ್ರದುರ್ಗದಲ್ಲಿ 30 ಹುಡುಗರಿಗಿಂತ ಜಾಸ್ತಿ ಕಾಲೇಜಿನಲ್ಲಿ ಓದುತ್ತಿದ್ದಾರೆ. ಅವರಿಗೆ ಹಾಸ್ಟೆಲುಗಳಿಗೆ ಪ್ರವೇಶ ಕೊಡುದಿಲ್ಲ, ತೊಂದರೆಯಾಗಿದೆ. ಆದುದರಿಂದ ಬೆಂಗಳೂರು, ಮೈಸೂರಿನಲ್ಲಿ ಯಾವರೀತಿ ಆದಿಕರ್ನಾಟಕ ಹಾಸ್ಟೆಲುಗಳನ್ನು ನಡೆಸುತ್ತಿದ್ದೀರೋ ಅದೇರೀತಿ ಚಿತ್ರದುರ್ಗದಲ್ಲಿಯೂ ಮಾಡಬೇಕೆಂದು ಹೇಳುತ್ತೇನೆ. ಅಲ್ಲಿ ಈಗ ಹುಡುಗರಿಗೆ ಇಳಿದುಕೊಳ್ಳುವುದಕ್ಕೂ ಸ್ಥಳವಿಲ್ಲ. ವಿದ್ಯಾಭ್ಯಾಸದ ಇರಾಖಿಯಿಂದ ಗ್ಯಾಂಟು ತೆಗೆದುಕೊಳ್ಳುವ ವಿದ್ಯಾರ್ಥಿ ನಿಲಯಗಳಲ್ಲಿ ಇವರನ್ನು ಸೇರಿಸುವುದಿಲ್ಲ. ಇದರಿಂದ ಅನೇಕ ವಿದ್ಯಾರ್ಥಿಗಳು ವಿದ್ಯಾಭ್ಯಾಸವನ್ನು ನಿಲ್ಲಿಸಬೇಕಾಗಿದೆ. ಚಿತ್ರದುರ್ಗದಲ್ಲಿ ವಿಶ್ವವಿದ್ಯಾನಿಲಯದ ಹಾಸ್ಟೆಲು ಏರ್ಪಾಡು ಮಾಡಬೇಕೆಂದು ಈ ಮೂಲಕ ಕೇಳಿಕೊಳ್ಳುತ್ತೇನೆ.

Scholarship for Girls of Backward Communities.

*ಶ್ರೀಮತಿ ಬಿ. ಎಲ್. ಸುಬ್ಬಮ್ಮ (ಚಿಕ್ಕಮಗಳೂರು —ಮೂಡಿಗೆರೆ).—ಸ್ವಾಮಿ, ಮಿಡ್ಲ್ ಸ್ಕೂಲು, ಹೈಸ್ಕೂಲುಗಳಲ್ಲಿ ಹಿಂದುಳಿದ ಪಂಗಡಗಳ ವಿದ್ಯಾರ್ಥಿ ವೇತನಗಳನ್ನು ಜಾಸ್ತಿ ಒದಗಿಸಬೇಕೆಂಬ ವಿಚಾರವನ್ನು ಸಭೆಯ ಮುಂದಿಡಬೇಕೆಂದು ಆಶಿಸುತ್ತೇನೆ. ಈಗತಾನೇ ಮಾತನಾಡಿದ ಸ್ನೇಹಿತರೂ ಈ ಬಗ್ಗೆ ಕೆಲವು ವಿಷಯಗಳನ್ನು ಸರ್ಕಾರದ ಗಮನಕ್ಕೆ ತಂದಿದ್ದಾರೆ. ಸರ್ಕಾರದವರು ವೇತನಗಳನ್ನೇನೋ ಒದಗಿಸುತ್ತಾರೆ. ಆದರೆ ನೂರು ಜನ ವಿದ್ಯಾರ್ಥಿಗಳಿದ್ದರೆ ಎರಡು ವೇತನಗಳೂ ಇಲ್ಲದೇ ಹೋದರೆ ಎಷ್ಟು ಕಷ್ಟ ವೆಂಬುದನ್ನು ತಾವೇ ಯೋಚಿಸಬೇಕು. ಇದನ್ನು ಹಂಚುವಾಗ ಬಹಳ ಕಷ್ಟವಾಗುತ್ತದೆ. ಅರ್ಹರಾದವರು ಹೆಚ್ಚಾಗಿದ್ದು ವೇತನಗಳ ಸಂಖ್ಯೆ ಬಹಳ ಕಡಮೆಯಿದ್ದರೆ ಏನು ಮಾಡುವುದು? ವೇತನಗಳ ಸಮಿತಿಯ ಸದಸ್ಯರಿಗೆ ಇದನ್ನು ನೋಡಿ ಏಕಾದರೂ ನಾವು ಈ ಸಮಿತಿಯ ಸದಸ್ಯರಾದೆವೋ ಎನಿಸುತ್ತದೆ. ಜನರಿಗೆ ಉತ್ತರ ಹೇಳುವುದು ಕಷ್ಟವಾಗುತ್ತದೆ. ಆದುದರಿಂದ, ಸರ್ಕಾರದವರು ವೇತನಗಳನ್ನು ಜಾಸ್ತಿ ಒದಗಿಸಿಕೊಡಬೇಕು. ಸರ್ಕಾರದವರು ಅನೇಕ ಕೆಲಸ ಕಾರ್ಯಗಳನ್ನು ಮಾಡುತ್ತಿದ್ದಾರೆ. ವಯಸ್ಕರ ಶಿಕ್ಷಣ ಸಮಿತಿ ಎಂದು ಮಾಡಿ ಮೂರು ನಾಲ್ಕು ಲಕ್ಷ ರೂಪಾಯಿ ಒದಗಿಸುತ್ತಿದ್ದಾರೆ. ಹಳ್ಳಿಯ ಮಕ್ಕಳಿಗೆ ಓದುವುದಕ್ಕೆ ಅನಾನುಕೂಲವಿರುವಾಗ ಇಂಥ ಸಂಸ್ಥೆಗಳಿಂದ ಜನರಿಗೆ ಏನೂ ಅನುಕೂಲವಾಗುತ್ತಿಲ್ಲ. ಹಳ್ಳಿಗಳಲ್ಲಿ ವಿದ್ಯಾರ್ಥಿ ವೇತನಗಳನ್ನು ಹೆಚ್ಚಾಗಿ ಕೊಟ್ಟರೆ ದೇಶದ ಮಕ್ಕಳು ಉದ್ಧಾರವಾಗಿ ದೇಶಕ್ಕೆ ಒಳ್ಳೆಯದಾಗುತ್ತದೆ. ಇನ್ನು ಮುಂದಾದರೂ ಜಾಸ್ತಿ ಮಾಡಬೇಕೆಂದು ಸೂಚಿಸುತ್ತೇನೆ.

ನನ್ನದು ಇನ್ನೊಂದು ಖೋತಾ ನಿರ್ಣಯವಿದೆ. ಸ್ಕೂಲುಗಳಲ್ಲಿ ಪಠ್ಯ ಪುಸ್ತಕಗಳನ್ನು ವರ್ಷ ವರ್ಷವೂ ಬದಲಾಯಿಸುತ್ತಿದ್ದಾರೆ. ಇದರಿಂದ ತಂದೆ ತಾಯಿಗಳಿಗೆ ತೊಂದರೆಯಾಗಿದೆ. ಅವರಿಗೆ ಹಣವಿಲ್ಲದ ಚಿಂತೆ; ಅನಾವಶ್ಯಕವಾಗಿ ಪುಸ್ತಕಗಳನ್ನು ಅವರು ಕೊಂಡು ಕೊಳ್ಳಬೇಕಾಗಿದೆ. ಯಾರನ್ನಾದರೂ ಸಂತೋಷ ಪಡಿಸುವುದಕ್ಕಾಗಿ ಈ ರೀತಿ ಬದಲಾಯಿಸುತ್ತಾರೋ ಗೊತ್ತಿಲ್ಲ. ಹಿಂದೆ ಚ. ವಾಸುದೇವಯ್ಯನವರು ಬರೆಯುತ್ತಿದ್ದ ಪುಸ್ತಕಗಳು ಎಷ್ಟೋ ಚೆನ್ನಾಗಿದ್ದವು. ಪ್ರೈಮರಿ ಎರಡನೆಯ ತರಗತಿಗೆ ಬಂದರೆ ಹುಡುಗರು ಚೆನ್ನಾಗಿ ಓದುವುದನ್ನು ಕಲಿಯುತ್ತಿದ್ದರು.

4-30 P M.

ಈಗ ವರ್ಷ ವರ್ಷಕ್ಕೆ ಬದಲಾಯಿಸುತ್ತಾ ಇರುವುದರಿಂದ ಅದರಲ್ಲಿ ಒಂದು standard ಕೂಡ ನರಿಯಾಗಿರುವದಿಲ್ಲ. ಹೀಗಿರುವುದರಿಂದ ಹುಡುಗಿಯರ ವಿದ್ಯಾಭ್ಯಾಸಕ್ಕೆ ತೊಂದರೆಯಾಗುತ್ತದೆ. ಒಂದು ಮನೆಯಲ್ಲಿ ತಮ್ಮ 5-6 ಮಕ್ಕಳುಗಳು ಸ್ಕೂಲಿಗೆ ಕಳುಹಿಸುತ್ತಿದ್ದಾರೆ, ಅಲ್ಲಿ ತಂದೆ ತಾಯಿಗಳಿಗೆ ಒಂದೇಸಾರಿ 6 ಪುಸ್ತಕಗಳನ್ನು ತೆಗೆದುಕೊಳ್ಳುವುದು ಕಷ್ಟ. ಆದ್ದರಿಂದ ಸರ್ಕಾದವರು ಈ ನಿರ್ದಿಷ್ಟವಾದ ವಿಚಾರವನ್ನು ಯೋಚಿಸಬೇಕು ಎಂದು ಹೇಳಿ ಈ ನಿರ್ಣಯವನ್ನು ನಾನೆ ಮುಂದೆ ಇಡುತ್ತೇನೆ.

Primary Education.

*ಶ್ರೀಯು. ಎಂ. ಮಾದಪ್ಪ (ಚಾಮರಾಜನಗರ).—ಸ್ವಾಮಿ, ಈಗ ಸಂಸ್ಥಾನದಲ್ಲಿ ಸುಮಾರು 10,177 ಪ್ರಾಥಮಿಕ ಶಾಲೆಗಳಲ್ಲಿ 9,03,106 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. 1951ನೇ census ಪ್ರಕಾರ ನಮ್ಮಲ್ಲಿ ಆರು ವರ್ಷದಿಂದ 12 ವರ್ಷ ವಯಸ್ಸು ಇರತಕ್ಕಂಥ 14,33,303 ಮಕ್ಕಳು ನಮ್ಮ ಸಂಸ್ಥಾನದಲ್ಲಿದ್ದಾರೆಂದು ತಿಳಿದುಬರುತ್ತದೆ. ಈ ಲೆಕ್ಕಾಚಾರದ ಪ್ರಕಾರ ಸುಮಾರು ಶೇಕಡ 50 ರಷ್ಟು ಮಕ್ಕಳು ಸ್ಕೂಲುಗಳಿಗೆ ಹೋಗುವುದಿಲ್ಲ ಎಂದು ಸಿದ್ಧಾಂತವಾಗುತ್ತದೆ. ಈಗ ಆರು ವರ್ಷದಿಂದ 12 ವರ್ಷಗಳವರೆಗೆ ಮಕ್ಕಳೇ ಇಷ್ಟಾಗಿರುವಾಗ ಆರರಿಂದ 14 ವರ್ಷಗಳವರೆಗಿನ ಮಕ್ಕಳು ಎಷ್ಟು ಮಂದಿ ಇದ್ದಾರೆ ಎಂದು ಲೆಕ್ಕಾಚಾರ ಮಾಡಿದ ಪಕ್ಷದಲ್ಲಿ ಅವರ ಸಂಖ್ಯೆ ಇನ್ನೂ ಹೆಚ್ಚುತ್ತದೆ ಎಂಬುದು ಕಾಣುತ್ತದೆ. 1951ನೇ ಇಸವಿಯಿಂದ ಈ ವಯಸ್ಸಿನ ಮಕ್ಕಳು ಮತ್ತಷ್ಟು ಹೆಚ್ಚಿವೆ ಎಂದು ಹೇಳುವುದರಲ್ಲಿ ಸಂಶಯವಿಲ್ಲ. ಹೀಗೆ ದಿನೇ ದಿನೇ ಮಕ್ಕಳ ಸಂಖ್ಯೆ ಹೆಚ್ಚುತ್ತಿದೆ. ಸ್ಕೂಲುಗಳ ಸಂಖ್ಯೆ ಅಷ್ಟು ಅಧಿಕ ಪ್ರಮಾಣದಲ್ಲಿ ಹೆಚ್ಚುತ್ತಾ ಇಲ್ಲ. ಇದರಿಂದ ಅಕ್ಷರಸ್ಥರನ್ನಾಗಿ ಮಾಡುವ ಉದ್ದೇಶ ಸರ್ಕಾರಕ್ಕೆ ಇಲ್ಲವೆಂಬುದನ್ನು ನಾನು ತಿಳಿಯುತ್ತೇನೆ. ಅದರಲ್ಲಿ ಈಗ ನಮ್ಮಲ್ಲಿ ಸ್ಕೂಲುಗಳು ಎಷ್ಟಿವೆ ಮತ್ತು ಎಷ್ಟು ವಿದ್ಯಾರ್ಥಿಗಳು

(ಶ್ರೀ ಯು. ಎಂ. ಮಾದಪ್ಪ.)

ಇದ್ದಾರೆ ಎಂಬುದನ್ನು ಇಲ್ಲಿ ಹೇಳಿದ್ದಾರೆ. ಇದನ್ನೆಲ್ಲಾ ಏತಕ್ಕೆ ಹೇಳುತ್ತೇನೆಂದರೆ, Directive Principles of State Policy, article 45ರಲ್ಲಿ ಈ ರೀತಿ ಹೇಳಿದ್ದಾರೆ.

> "The State shall endeavour to provide, within a period of 10 years from the commencement of this Constitution, for free and compulsory education for all children until they complete the age of 14 years"

ಹೀಗೆ shall endeavour ಎಂದು ಹೇಳಿರುವುದರಿಂದ ಸರ್ಕಾರದಮೇಲೆ ಜವಾಬ್ದಾರಿ ಇದೆ ಎಂಬುದನ್ನು ತಾವು ತಿಳಿದುಕೊಳ್ಳಬೇಕು. ಈಗಾಗಲೇ ಐದು ವರ್ಷ ಕಾಲ ಕಳೆದಂತಾಯಿತು. ಈಗ ನಮಗೆ ಉಳಿದಿರತಕ್ಕದ್ದು ಐದು ವರ್ಷ. ಈ ಐದು ವರ್ಷಗಳ ಅವಧಿಯಲ್ಲಿ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡುವುದು ಸರ್ಕಾರದ ಜವಾಬ್ದಾರಿಯಾಗಿದೆ. ಅದಕ್ಕೆ ಒಂದು ಸ್ಕೀಮನ್ನು ತಯಾರುಮಾಡುವುದು ಅವಶ್ಯಕವೆಂದು ನಾನು ಈ ದಿವಸ ಒತ್ತಾಯಮಾಡಬೇಕಾಗಿದೆ. ಹೀಗೆ ಮಾಡದೇ ಇದ್ದ ಪಕ್ಷದಲ್ಲಿ Directive Principles of State Policyಗೆ ವಿರುದ್ಧವಾಗಿ ನಡೆದಂತಾಗುತ್ತದೆ. ಇದನ್ನು ಮಾಡಬೇಕಾದರೆ ಯಾವ ನೀತಿಯನ್ನು ಅನುಸರಿಸಬೇಕು ಎಂದು ತಾವು ಕೇಳಿದರೂ ಕೇಳಬಹುದು. ನನ್ನ ಸ್ವಂತ ದೃಷ್ಟಿಯಿಂದ ತಿಳಿಸುವುದಾದರೆ ಈಗ ಕಡ್ಡಾಯವಾಗಿ ಶಿಕ್ಷಣ ಪದ್ಧತಿಯನ್ನು ಆದಷ್ಟು ಜಾಗ್ರತೆ ಸಂಸ್ಥಾನದಲ್ಲಿ ತರಬೇಕು. ಕಡ್ಡಾಯವಾಗಿ ಈ ಹಾಜರಾತಿ ಪದ್ಧತಿಯನ್ನು ಮಾತ್ರ ಗಮನದಲ್ಲಿಟ್ಟುಕೊಳ್ಳದೆ, ಸ್ಕೂಲುಗಳಿಗೆ ಹೋಗತಕ್ಕಂಥ ಮಕ್ಕಳನ್ನು ಯಾವುದಾದರೂ ಸ್ಕೂಲುಗಳಿಗೆ ತಾಯಿ ತಂದೆಗಳು ಕಡ್ಡಾಯವಾಗಿ ಕಳುಹಿಸುವಂತೆ ಒತ್ತಾಯ ಮಾಡಬೇಕು. ಹಾಗೆ ಅವರು ಕಳುಹಿಸದೆ ಇದ್ದ ಪಕ್ಷದಲ್ಲಿ Reforms Committee ಹೇಳಿದಂತೆ ಒಂದು ಪಂಚಾಯತಿ ಸದಸ್ಯರನ್ನೊಳಗೊಂಡ ಕಮಿಟಿ ಮಾಡಿ, ಆ ಕಮಿಟಿಯವರಿಗೆ ಅಧಿಕಾರ ಕೊಟ್ಟು ಅವರ ಅಧಿಕಾರ ಬಲದಿಂದಲಾದರೂ ಮಕ್ಕಳು ವಿದ್ಯಾವಂತರಾಗುವ ಪ್ರಯತ್ನವನ್ನು ಸರ್ಕಾರದವರು ಮಾಡಬೇಕು. ಏತಕ್ಕೆಂದರೆ ಒಂದು ಗುರುತರವಾದ ಜವಾಬ್ದಾರಿ ಸರ್ಕಾರದಮೇಲೆ ಇರುತ್ತದೆ. ಈಗ ಇಷ್ಟೊಂದು ಮಾಡಿದ ತಕ್ಷಣಕ್ಕೇ compulsory education ಕೊಟ್ಟಾತ್ಕ್ಷಣಕ್ಕೇ ಅವರ ಕಾರ್ಯ ಮುಗಿಯಿತೆಂದು ತಿಳಿದುಕೊಳ್ಳುವಹಾಗಿಲ್ಲ. ಈಗ ಎಷ್ಟೋ ಗ್ರಾಮಗಳಲ್ಲಿ ಸ್ಕೂಲುಗಳೇ ಇಲ್ಲ. 500 ಪ್ರಜಾ ಸಂಖ್ಯೆ ಇರತಕ್ಕಂಥ ಎಲ್ಲಾ ಗ್ರಾಮಗಳಿಗೂ ಸ್ಕೂಲುಗಳನ್ನು ಕೊಟ್ಟು, 100—200 ಪ್ರಜಾಸಂಖ್ಯೆ ಇರುವ ಗ್ರಾಮಗಳು ಹತ್ತಿರವಿದ್ದ ಪಕ್ಷದಲ್ಲಿ ಮೂರು-ನಾಲ್ಕು ಗ್ರಾಮಗಳಿಗೆ ಒಂದು ಪ್ರೈಮರಿ ಸ್ಕೂಲನ್ನು ಕಡ್ಡಾಯವಾಗಿ ಕೊಡುವ ಪದ್ಧತಿಯನ್ನು ಸರ್ಕಾರದವರು ಜಾರಿಗೆ ತರಬೇಕು. ಹೀಗೆ ಮಾಡುವುದರಿಂದ ವರ್ಷೇ ವರ್ಷೇ ಸ್ಕೂಲುಗಳನ್ನು ಹೆಚ್ಚಿಸಬಹುದು. ಈಗ ಇರತಕ್ಕಂಥ ಸ್ಕೂಲುಗಳಲ್ಲಿಯೂ ಸಹ ಸ್ಥಳಾವಕಾಶವಿಲ್ಲವೆಂದು ನಾವು ಹೇಳಬೇಕಾಗಿ ಬಂದಿದೆ. ಸ್ಥಳಾವಕಾಶವಿಲ್ಲದೆ ಇರುವುದರಿಂದ ಹೆಚ್ಚಿಗೆ ಮಕ್ಕಳು ಇದ್ದರೂ ಅವರನ್ನು ಸ್ಕೂಲುಗಳಿಗೆ ಸೇರಿಸಿಕೊಳ್ಳುತ್ತಾ ಇಲ್ಲ. ಆ ಒಂದು ಕೊರತೆ ಇರುವುದರಿಂದ ಕಟ್ಟಡಗಳನ್ನು ವಿಶಾಲ ಮಾಡುವುದಕ್ಕೆ ಪ್ರತಿಯೊಂದು ಗ್ರಾಮದಲ್ಲೂ ಸರ್ಕಾರ ಹೆಚ್ಚು ಗಮನ ಕೊಡಬೇಕು. ಉದಾಹರಣೆಗೆ ಮೈಸೂರು ಜಿಲ್ಲೆಯಲ್ಲಿ ಗ್ರಾಮಸ್ಥರು ಮುಂದೆಬಂದು ತಮ್ಮ ತಮ್ಮ quota ವನ್ನು ಕೊಟ್ಟರೂ, ಪಂಚಾಯತಿಯವರು ಹಣವನ್ನು ಕೊಟ್ಟರೂ, ಇದನ್ನು ಕಾರ್ಯಗತ ಮಾಡುವುದಕ್ಕೆ ಜಿಲ್ಲಾ ಬೋರ್ಡಿಗೆ ಸಾಧ್ಯವಿಲ್ಲ. ಇದಕ್ಕೆ ಸರ್ಕಾರದ ತಾತ್ಸಾರ ಮನೋಭಾವವೇ ಕಾರಣವೆಂದು ಹೇಳಿದರೂ ತಪ್ಪಾಗುವುದಿಲ್ಲ. ಏಕೆಂದರೆ ಜಿಲ್ಲಾ ಬೋರ್ಡಿನವರು ಈಗಾಗಲೇ ಕಟ್ಟಿಸಿರತಕ್ಕಂಥ ಕಟ್ಟಡಗಳಿಗೆ ಅವರು ಖರ್ಚುಮಾಡಿದ ಹಣವನ್ನು ಸರ್ಕಾರ ಕೊಡಬೇಕೆಂದು ಮೂರು—ನಾಲ್ಕು ವರ್ಷಗಳಿಂದ ಒತ್ತಾಯ ಮಾಡಿದರೂ, ಜಿಲ್ಲಾ ಬೋರ್ಡಿಗೆ ತಲಪಬೇಕಾದ ಹಣ ತಲಪಿಲ್ಲ. ಈ ರೀತಿ ಮಾಡುವುದರಿಂದ ಜಿಲ್ಲಾ ಬೋರ್ಡಿನ ಜವಾಬ್ದಾರಿಯನ್ನು ಸರ್ಕಾರ ಪೊಟಕು ಮಾಡಿದಂತಾಗಿದೆ ಎಂದು ಹೇಳಿದರೆ ತಪ್ಪಾಗುವುದಿಲ್ಲ. ಸ್ಕೂಲುಗಳಲ್ಲಿ ಸಾಕಾದಷ್ಟು ಉಪಾಧ್ಯಾಯರುಗಳಿಲ್ಲದೆ ಇರುವುದು ಮತ್ತೊಂದು ಕೊರತೆ. ಹೆಚ್ಚಿಗೆ ಉಪಾಧ್ಯಾಯರುಗಳು ಇಲ್ಲದೆ ಇರುವುದರಿಂದ ಹೆಚ್ಚಿಗೆ ಮಂದಿ ಹುಡುಗರನ್ನು ಸ್ಕೂಲುಗಳಿಗೆ ಸೇರಿಸಿಕೊಳ್ಳುತ್ತಾ ಇಲ್ಲ. Additional hands ಬೇಕು ಎಂದು ಎಷ್ಟೋ ಸ್ಕೂಲುಗಳಲ್ಲಿ ಕೇಳುತ್ತಾ ಇದ್ದರೂ Additional hands supply ಮಾಡುತ್ತಾ ಇಲ್ಲ. ಸರ್ಕಾರ ಕೂಡಲೇ ಈ ವಿಷಯಕ್ಕೆ ಗಮನ ಕೊಡಬೇಕು. ಹಾಗೆ ಮಾಡುವುದರಿಂದ ಹೆಚ್ಚಿಗೆ ವಿದ್ಯಾಭ್ಯಾಸ ಮಾಡುವುದಕ್ಕೆ ಅವಕಾಶವಾಗುತ್ತದೆ. Single teacher ಸ್ಕೂಲುಗಳಿವೆ. ಅಂಥ ಕಡೆ ಉಪಾಧ್ಯಾಯರು ರಜ ತೆಗೆದುಕೊಂಡು ಸ್ಕೂಲನ್ನು ಮುಚ್ಚಿಹೋದರೆ ಅವರು ಬರುವವರೆಗೆ ಸ್ಕೂಲು ಮುಚ್ಚಿಯೇ ಇರುತ್ತದೆ. ಹೀಗಾಗಿ ಹೆಚ್ಚು ವಿದ್ಯಾರ್ಥಿಗಳಿಗೆ ಶಿಕ್ಷಣ ಕೊಡುವುದಕ್ಕೆ ಅವಕಾಶವಿಲ್ಲ. ಇನ್ನೊಂದು ವಿಚಿತ್ರವಾದ ಸಂಗತಿ ಏನೆಂದರೆ ಈ aided ಸ್ಕೂಲುಗಳ ವಿಷಯ. Post-war Development of Primary Education in Mysore ಎನ್ನುವುದರಮೇಲೆ ರಿಪೋರ್ಟ್ ತಯಾರು ಮಾಡಿದ ಕಾಲದಿಂದಲೂ ಸಹ ಈ aided ಸ್ಕೂಲುಗಳನ್ನು ಗವರ್ನಮೆಂಟ್ ಸ್ಕೂಲುಗಳನ್ನಾಗಿ ಪರಿವರ್ತನೆ ಮಾಡಬೇಕು ಎಂದು ಒತ್ತಾಯವಿದೆ. ಈ ವಿಷಯಕ್ಕೆ ಸರ್ಕಾರ ಸ್ವಲ್ಪವೂ ಸಹ ಗಮನ ಕೊಟ್ಟಿಲ್ಲ. ಹಾಗೆ ಗಮನ ಕೊಟ್ಟರೆ efficiency ಹೆಚ್ಚುವುದಕ್ಕೆ ಅವಕಾಶವಿದೆ. ನಮ್ಮಾರು ಒಂದು ಸ್ಕೂಲಿಗೆ 47 ರೂಪಾಯಿ ಹೆಚ್ಚಿಗೆ ಖರ್ಚು ಬೀಳಬಹುದು ಎಂದು ಈ ರಿಪೋರ್ಟಿನಲ್ಲಿ ತಿಳಿಸಿದ್ದಾರೆ. ಆದ್ದರಿಂದ ಈ ವಿಷಯಕ್ಕೆ ಸರ್ಕಾರ ಪೂರ್ಣ ಗಮನವನ್ನು ಕೊಡಬೇಕು. ಅದೂ ಅಲ್ಲದೆ ಉಪಾಧ್ಯಾಯರಿಗೆ trainingನ್ನು ಕೊಡಿಸಬೇಕಾದದ್ದು ಹೆಚ್ಚಿಗೆ ಅವಶ್ಯಕತೆ ಇದೆ. Training ಇಲ್ಲದೇ ಇರುವುದರಿಂದ, ಅನೇಕ ಉಪಾಧ್ಯಾಯರುಗಳ efficiency ಕಡಮೆಯಾಗಿದೆ. ಸರ್ಕಾರದವರು ಹಿಂದಿಗಿಂತ ಹೆಚ್ಚಿಗೆ ಮಂದಿ ಉಪಾಧ್ಯಾಯರುಗಳಿಗೆ ತನ್ನ ಸ್ವಂತ ಖರ್ಚಿನಿಂದ training ಕೊಡುವುದಕ್ಕೆ ಅವಕಾಶ ಮಾಡಿಕೊಡಬೇಕು.

Mr. SPEAKER.—The member may come to the cut motion proper.

ಶ್ರೀ ಯು. ಎಂ. ಮಾದಪ್ಪ.—ಇವತ್ತಿನ ದಿವಸ ಸ್ಕೂಲುಗಳಲ್ಲಿ furniture ಇಲ್ಲ. ಉಪಾಧ್ಯಾಯರು ಕಿಟಿಕಿಗಳಮೇಲೆ ಕುಳಿತು ಕೊಳ್ಳುತ್ತಾರೆ. ಹುಡುಗರು ನೆಲದಮೇಲೆ ಕುಳಿತುಕೊಳ್ಳುತ್ತಾರೆ. ಕುರ್ಚಿಗಳಿಗೆ

ನಾಲ್ಕು ಕಾಲುಗಳಿಗೆ ಬದಲಾಗಿ ಮೂರು ಕಾಲುಗಳಿರುತ್ತವೆ. ಈ ರೀತಿ ಇರುವುದರಿಂದ ಸರ್ಕಾರದವರು ಈ ವಿಷಯದಲ್ಲಿ ಎಲ್ಲೆಲ್ಲಿ ಯಾವ ಸ್ಕೂಲುಗಳಲ್ಲಿ ಸಾಕಷ್ಟು furniture ಇಲ್ಲವೋ ಅದನ್ನು ಕಳಿದು ಆದಷ್ಟು ಜಾಗ್ರತೆ supply ಮಾಡಬೇಕು. ಬೋರ್ಡುಗಳ ವಿಷಯದಲ್ಲೂ ಪೂರ್ಣ ಗಮನ ಕೊಡಬೇಕೆಂದು ಹೇಳುತ್ತೇನೆ.

School Buildings in Rural Parts.

ಶ್ರೀ ಟಿ. ಎಕ್. ಮೂಡಲಗಿರಿಗೌಡ (ಕುಣಿಗಲ್).— ನನ್ನ 133ನೇ ಖೋತಾ ಸೂಚನೆಯ ಮೇಲೆ ಮಾತನಾಡುತ್ತೇನೆ. ಈ ಸ್ಕೂಲ್ ಬಿಲ್ಡಿಂಗ್‌ಗಳ ವಿಚಾರದಲ್ಲಿ ಸರ್ಕಾರದವರು ಒಂದು ನಿರ್ದಿಷ್ಟವಾದಂಥ ಯೋಜನೆಯನ್ನು ಹಾಕಿಕೊಳ್ಳಬೇಕು ಎಂದು ನಾನು ಅವರನ್ನು ಕೇಳಿಕೊಳ್ಳುತ್ತೇನೆ. ಸ್ಕೂಲ್ ಬಿಲ್ಡಿಂಗ್‌ಗಳು, ಅದರಲ್ಲೂ ಪ್ರೈಮರಿ ಸ್ಕೂಲ್ ಕಟ್ಟಡಗಳ ವಿಚಾರ ಬಹಳ ಮುಖ್ಯವಾದುದು. ಈಗಾಗಲೇ ಈ ನಭೆಯಲ್ಲಿ ವ್ಯಕ್ತಪಡಿಸಿರುವ ಹಾಗೆ ಯಾವ ಹಳ್ಳಿಗೆ ಹೋಗಲಿ ಪ್ರೈಮರಿ ಸ್ಕೂಲುಗಳನ್ನು ಚಾವಡಿಗಳಲ್ಲಿ, ದೇವಸ್ಥಾನಗಳಲ್ಲಿ, ಹಾಳು ಮಂಟಪಗಳಲ್ಲಿ, ಈ ರೀತಿಯಾದ ಪ್ರದೇಶಗಳಲ್ಲಿ ನಡೆಸುತ್ತಿದ್ದಾರೆ. ಕುಳಿತು ಕೊಳ್ಳತಕ್ಕ ಮಕ್ಕಳಿಗೂ ಸರಿಯಾದ ವ್ಯವಸ್ಥೆ ಇರುವುದಿಲ್ಲ. ಆದ್ದರಿಂದ ಇದಕ್ಕೆ ನಿರ್ದಿಷ್ಟವಾಗಿ ಯೋಜನೆಯನ್ನು ಮಾಡಬೇಕು. ಎರಡು-ಮೂರು ವರ್ಷಗಳ ಹಿಂದೆ ಪ್ರೈಮರಿ ಸ್ಕೂಲ್ ಬಿಲ್ಡಿಂಗ್ಸಿಗೆ ಗ್ರಾಮಸ್ಥರು ಏನಾದರೂ ಅಲ್ಪಸ್ವಲ್ಪ ಹಣವನ್ನೊದಗಿಸಿದರೆ ಸರ್ಕಾರದವರು 1½ ಸಾವಿರ ಅಥವಾ 2 ಸಾವಿರ ರೂಪಾಯಿಗಳವರೆಗೂ ಹಣವನ್ನು ಒದಗಿಸಿ ಹೀಗೆ ಎಲ್ಲ ಗ್ರಾಮಸ್ಥರು ಮುಂದೆ ಬರುತ್ತಾರೋ, ಅಂಥ ಕಡೆ ಸ್ಕೂಲ್ ಬಿಲ್ಡಿಂಗನ್ನು ಕಟ್ಟಿಸಿಕೊಡತಕ್ಕಂಥ ವ್ಯವಸ್ಥೆಯನ್ನು ಒಂದು ವರ್ಷಕಾಲ ಮಾಡಿದರು. ಅದನ್ನು ಪತಕ್ಕೋ ಹಾಗೆಯೇ ನಿಲ್ಲಿಸಿಬಿಟ್ಟರು. ಈ ರೀತಿ ವ್ಯವಸ್ಥೆ ಮಾಡಿದ ಕಾಲದಲ್ಲಿ ಅನೇಕ ಕಡೆ ಡಿಸ್ಟ್ರಿಕ್ಟು ಬೋರ್ಡಿನವರು ಮತ್ತು ರೆವಿನ್ಯೂ ಇಲಾಖೆಯವರು ಎಲ್ಲಿ ಬಹಳ ಜರೂರು ಆಗಿದೆಯೋ ಅಲ್ಲಿ priority ಹಾಕಿಕೊಂಡು ಸ್ಕೂಲ್ ಕಟ್ಟಡಗಳನ್ನು ಕಟ್ಟಿಸಿದರು. ಅದೇ ರೀತಿಯಾಗಿ ಮೂರು ವರ್ಷಗಳ ಅಥವಾ ಐದು ವರ್ಷಗಳ ಒಂದು ಯೋಜನೆಯನ್ನು ಹಾಕಿಕೊಂಡು ಪ್ರೈಮರಿ ಸ್ಕೂಲ್ ಕಟ್ಟಡಗಳನ್ನು ಪೂರೈಸಬೇಕು ಎಂಬ ಪ್ರಯತ್ನವನ್ನು ಮಾಡಿದರೆ ಪ್ರೈಮರಿ ಸ್ಕೂಲ್ ಬಿಲ್ಡಿಂಗ್‌ಗಳು ಉತ್ತಮ ಸ್ಥಿತಿಗೆ ಬರುವುದಕ್ಕೆ ಸಾಧ್ಯವಾಗುತ್ತದೆ. ಮೊನ್ನೆ ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಭಾಷಣದಲ್ಲಿ ಹೇಳಿದ್ದನ್ನು ಕೇಳಿದರೆ ನಮಗೆ ಸ್ವಲ್ಪ ದಿಗಿಲಾಗುತ್ತದೆ. ಯಾವ ಗ್ರಾಮಸ್ಥರು ಉಪಾಧ್ಯಾಯರಿಗೆ ಮತ್ತು ಸ್ಕೂಲಿಗೆ ಬಿಲ್ಡಿಂಗ್‌ಗಳನ್ನು ಒದಗಿಸಿಕೊಡುತ್ತಾರೋ ಅವರಿಗೆ ಸ್ಕೂಲನ್ನು ಕೊಡುತ್ತಾರೆಂದು ವ್ಯಕ್ತಪಡಿಸಿದ್ದಾರೆ. ಅದು ಸರ್ವಥಾ ನ್ಯಾಯವಲ್ಲ. ಈಗ 100ಕ್ಕೆ 10-20 ಗ್ರಾಮಗಳಲ್ಲಿ ಮಾತ್ರ ಸ್ಕೂಲ್ ಕಟ್ಟಡಗಳಿವೆ. ಬಾಕಿ ಯಾವ ಗ್ರಾಮದಲ್ಲಿಯೂ ಕಟ್ಟಡಗಳು ಇಲ್ಲದೆ ಸ್ಕೂಲುಗಳು ನಡೆಯುತ್ತಿವೆ. ಒಂದು ವಿಷಯ ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಅವರು ಕೊಟ್ಟ ಸೂಚನೆ ಚೌಕ ಮತ್ತು ಸಿಟಿಗಳಿಗೆ ಅನ್ಯಾಯವಾಗುತ್ತದೆ ಎಂಬುದನ್ನು ಕೇಳಿದ್ದೇನೆ. ಇಪ್ಪತ್ತಿನ ದಿವಸ ಹಳ್ಳಿಯಲ್ಲ 5-10 ರೂಪಾಯಿ, ಬಾಡಿಗೆ ಕೊಡಿ ಎಂದು ಕೇಳಿದರೆ ಎರಡು ರೂಪಾಯಿ ಕೊಡುತ್ತೇವೆಂದು ಸರ್ಕಾರದವರು ಹೇಳುತ್ತಾರೆ. ಆದರೆ ಪಟ್ಟಣಗಳಲ್ಲಿ 25 ರೂಪಾಯಿ ಕೊಡತಕ್ಕಂಥ ಕಡೆ 100 ರೂಪಾಯಿ ಬಾಡಿಗೆಯನ್ನು ಕೊಡುತ್ತಾರೆ. ಹೀಗೆ ಪಟ್ಟಣಗಳಲ್ಲಿ ಪ್ರೈಮರಿ ಸ್ಕೂಲುಗಳಿಗೆ ಸಾವಿರಾರು ರೂಪಾಯಿಗಳನ್ನು ಬಾಡಿಗೆ ಕೊಡುತ್ತಿದ್ದಾರೆ. ಆದರೆ ಹಳ್ಳಿಗಳ ವಿಷಯ ಬಂದರೆ "ನೀವು ಏನು ಕೊಡುತ್ತೀರಿ" ಎಂದು ಕೇಳುವುದು ನ್ಯಾಯವಾದುದಲ್ಲ. ಮೂರನೆ ಒಂದು ಭಾಗವನ್ನು ಹಳ್ಳಿಯವರು ಕೊಡಬೇಕು, ಬಾಕಿ ಹಣವನ್ನು ಸರ್ಕಾರದವರು ಒದಗಿಸಿಕೊಡುತ್ತಾರೆ ಎಂಬ ಥೋರಣೆ ತಾಳುವುದು ಸರಿಯಲ್ಲ. ರಸ್ತೆಗಳು ಮತ್ತು ಕುಡಿಯುವ ನೀರಿನ ಬಾವಿಗಳು ಎಷ್ಟು ಅವಶ್ಯಕವೋ ಸ್ಕೂಲ್ ಕಟ್ಟಡಗಳು ಅಷ್ಟೇ ಅವಶ್ಯಕ. ಆದ್ದರಿಂದ ಈ ಸ್ಕೂಲ್ ಕಟ್ಟಡಗಳ ಬಗ್ಗೆ ಒಂದು ಯೋಜನೆಯನ್ನು ಹಾಕಿಕೊಂಡು ಸರ್ಕಾರದವರು ನಿರ್ದಿಷ್ಟವಾಗಿ ಕಟ್ಟಡಗಳನ್ನು complete ಮಾಡಬೇಕು. ಇಲ್ಲದೇ ಹೋದರೆ ನೀವು ಕಟ್ಟಡಗಳನ್ನು ಕಟ್ಟಿಕೊಡಿ, ನಾವು ಸ್ಕೂಲುಗಳನ್ನು ಕೊಡುತ್ತೇವೆಂದು ಹೇಳುವುದು ನ್ಯಾಯವಾದುದಲ್ಲ. ಆದ್ದರಿಂದ ಈ ಸಾಲಿನಲ್ಲಿ ಹಳ್ಳಿಗೆ primary schoolಗಳ ಕಟ್ಟಡಗಳನ್ನು ನಿರ್ಮಾಣ ಮಾಡತಕ್ಕಂಥ ಒಂದು ಯೋಜನೆಯನ್ನು ಹಾಕುವ ಏರ್ಪಾಡನ್ನು ಮಾಡಬೇಕೆಂದು ಸರ್ಕಾರದವರನ್ನು ಒತ್ತಾಯಮಾಡುತ್ತೇನೆ.

Salaries of University Lecturers.

Sri Mulka GOVINDA REDDY (Chitaldrug).— Mr. Speaker, Sir, from the Primary School to the University the salaries that are being paid to the teaching profession are abnormally low and in fact, the lowest in India. The lot of these teachers deserves to be improved. In Mysore University, we are paying Rs. 100 per month to the Lecturer; whereas in Madras they are paying Rs. 250; in Andhra Rs. 250 and in Bombay Rs. 250, and the Reforms Committee in Mysore State has recommended to Rs. 150 to be the starting salary for a Lecturer in the Mysore University. The University Grant Commission have recommended Rs. 250 to be the minimum salary. I do not know why the Government of Mysore have not availed of the opportunity that has been provided by the Government of India. Whatever may be the obstacles, those obstacles must be got through and Government should see that the scales are recommended by the University Grant Commission are given effect to the University Lecturers in Mysore State, so that the standards in the University may be improved, so that the teaching profession may look to the profession as their main profession instead of looking to some other avocation for their livelihood.

Admission to Technical and Professional Colleges.

Sir, the admission to the colleges in the Mysore University has become a big scandal. There are nearly 5,000 candidates who seek admission to these professional and technical colleges and spend Rs. 5 lakhs, and the Admission Committees that were appointed, in some cases, were not satisfactorily working. The constitution of those Committees requires to be changed and it must be left to the heads of the institutions for framing rules regarding the number of students to be admitted to each institution according to the population or on some other basis be determined and these Admission Committees may be abolished.

Scout Organisation.

Sir, the Scouting Organisation is a very important organisation. This is a world organisation. This organisation imparts to the boys and girls to get themselves trained in character building. This is non-communal, non-political, nationalistic and in certain respect internationalistic. As some friends have already observed, it is absurd to encourage any organisation other than this. I would earnestly urge on the Government that the allotments that have been made for the Bharath Sevadal should be easily and profitably diverted to the Scouts Organisation and it deserves to be built up. The Cultural Development deserves to be abolished and the funds that were set apart for that department may be diverted for this department.

Lastly, Sir, after the inauguration of the Educational Reforms on the 30th January, examinations were held for Middle School, that is, for IV Year Class. I understand a number of students were made to fail. I do not know the reasons. I would urge upon the Government to examine this issue.

Mr. SPEAKER.—Now the Minister will reply.

***Sri A. G. RAMACHANDRA RAO.**—Sir, About 12 minutes have been left for me and I shall try to do my best to reply to all the points.

Regarding the University, Government has decided to introduce a new Bill. I hope it will be introduced during the course of this session and the demand for an autonomy in the new Bill that is going to be introduced, I hope, will commend itself to the House. Meanwhile, I want you to consider one or two things. If they want financial independence to run the University, Government will have no objection whatsoever, but if they want all the funds from the Government and then want to keep them out from having any kind of control, I do not think anybody would subscribe to that proposition. My Hon'ble friend Sri Srinivasa Iyengar said, that the discussion at the time of grant of demand in the Legislative Assembly or Council would be sufficient guarantee for it. I did not follow what he meant by it. Probably it would have been correct if he had said the reservation of control, it would have served the purpose. I have no quarrel. You can have any amount of control. Very well, Sir, I hope the Bill will suitably provide for it. Regarding the academic control. I might assure the House, Government does not want to have any power to control their status, but the increase in the number of faculties, etc., which would have financial effects on administration, that I think ought to be in the Government in so far as they are the people to provide funds.

Sri SRINIVASA IYENGAR.—Give it block grants and thereby you will not incur more.

Sri A. G. RAMACHANDRA RAO.—There are snags. Regarding administrative control, we have thought of introducing a University Service under the control of the University. I have just given you an outline of what the Government intends to do and the Bill, I hope, will satisfy all the members of this House. I do not want to go into details because I have no time.

Then, Sir, the conversion of Intermediate Colleges particularly in district headquarters into First Grade Colleges, that also is under the consideration of Government. As one Hon'ble friend put it, it would cost the Government Rs. 10 lakhs recurring expenditure.

The Government will view the matter with utmost sympathy and consideration.

Regarding the teachers' salary, Sir, I want to give one or two figures. Government is very anxious to do something in the matter. But that has become very difficult. There are nearly 25,000 teachers. One Hon'ble Member suggested to increase their pay by Rs. 5 and also pay the malnad allowance of Rs. 5—that means Rs. 10, both put together would cost nearly 30 lakhs of rupees. I wish I could do it, Sir, so that they can become responsible. Well, Sir, supposing we did here, what about the other categories in other Departments drawing similar salaries? For instance constables ?

(*Interruption*).

Sri P. R. RAMAIYA (Basavangudi).—My point is not the wholesale rise. The minimum is 25 rupees now; it should be raised to Rs. 30. That is the point.

Sri A. G. RAMACHANDRA RAO.—I cannot answer that. The Hon'ble Member must view this in a realistic way. Well, Sir, supposing we did it. . .

Sri A. BHEEMAPPA NAIK.—I wanted the school year and the college year to be changed. Nowhere in India the school year begins on 30th anuary.

Sri A. G. RAMACHANDRA RAO.—If I am given time, I shall explain the points. If there is interruption, then there will be difficulty.

One thing, all the teachers as well as the Hon'ble Members should appreciate. Because they could not sanction it, that is one of the reasons why we have increased the age of superannuation solely in the case of teachers so that they have got at least three more years of service to give and to that extent they are benefited and that privilege is given only to the teachers. One Hon'ble Member suggested that up to the middle school the education must be free and compulsory; Constitution demands it. I should say, the Mysore Government has anticipated this long back. Already the first eight years of education in Mysore is free, all the four years of primary and the four years of middle school courses. This, you don't find in any part of India. What has got to be done is to extend the eight years' course to every nook and corner of the State and make it satisfactory. Therefore a part of the ideal has been achieved, it is only the extension of it that is required. Whereas in other parts of India, they have not yet come to that point. I wish, Sir, even in those matters we could move forward, but it would cost us very heavily. That is the only point that is deterring us. If our friends had concentrated their attention and suggested measures whereby they could augment the resources, particularly for the expansion of education, I would have been very grateful to them and even now they can bestow their mind especially to the resources to push through this programme, realisation of which is common to both the opposition as well as to the Government.

Sri G. Narayana Gowda pointed out the need to reorganise the Department to secure effective supervision. In the Budget, Sir, already a sum of Rs. 50,000 has been provided for in addition to the usual allotment and we are trying to reorganise the Department so that there might be more effeetive supervision.

Sri V. M. Mascarenhas asked me as to what we would do in regard to the implementation of the Education Reforms Scheme, particularly regarding the Intermediate Course. As a matter of policy, all the Universities and the Central Board of Education have accepted three years' course for graduation. One year of the Intermediate will necessarily go to University. Regarding the other year, there is a controversy. Some are suggesting that it must be given to the High School; but important educationists are saying, 'You eliminate it altogether and have the course in the High School restricted to only three years'. That is a matter which is still in controversy. So far as Mysore is concerned, we have adopted the increase by one year. But in the light of the discussion and the literature that is coming in, we may have to revise it. But no decision has been taken; that will be decided immediately after the University Bill is introduced. Sri Mascarenhas was saying "Whatever

(SRI A. G. RAMACHANDRA RAO.)

you do, let it be done on the All India basis." Sure, that is this: 8-4-3.—about three years' course in the University—all this is in conformity with the All India ideals and practice.

About the commencement of the School Year, I wish some more Hon'ble Members had spoken on this subject, *viz.*, the commencement of the academic year on the Anniversary of Mahathma Gandhi. There is no doubt, Sir, difference of opinion. There is a large body who is supporting the view that Anniversary of Mahathma Gandhi should be fittingly commemorated and what has been done in Mysore is quite good; but there is a large body of other opinion also and I may also say that we have received several letters from inside and outside the country asking us to stick to old practice so that it might be in conformity with the All India practice. Those letters mainly say that the migration of students from Mysore to other places might be easier, but that number is very small. The more potent factor would be this: what about the collaboration of the University year and the Departmental year? We are expecting that the University would fall in line with us. But when the University becomes an autonomous body, we do not know what academic year they will have. The other important thing which we have to consider is as the financial year commences from the first of April whether it would be advantageous to have 30th January as academic year. During this year we have fully discussed the proposition having proper vision of the things; we may be able to overcome this difficulty. All the same, to have different startings in the different departments and different sections may not be proper. Anyway the experiment is going on and if there be any serious defect, we will consider it.

Next, Sir, I have already asked Mr. Sydney A. Thomas to come to me to further clarify his point.

Regarding Malnad and Maidan, already there is a rule to say that in places in Maidan with a population of more than 3,000 should be given priority in providing schools. Regarding Malnad population, the villages having more than 200 could be counted as having a claim for a school. Therefore we are already trying to provide more schools by an order.

Regarding the supernumerary Assistant Professors, Government cannot accept the supernumerary Assistant Professors. On the other hand, they want to reorganise the University staff into Professors, Readers and Lecturers and give them running grades if possible. That is under the consideration of Government. I hope it will not take years, but a month or two.

Regarding increase in the quantum of scholarships, it is no doubt true that the school-going population has increased and has been increasing fairly well, but it is very difficult to find resources. All the same, Government is considering as to how far they would be able to increase the freeships and that I hope a decision will be taken in the course of a week and we will decide the matter.

Well, Sir, regarding the Scouting and Seva Dal, much has been said about them. I have abosolutely no quarrel with them. I am one of those not only to retain the Scouts Organization but also to increase its utility and its scope of work.

5 P.M.

I hope no Scout authority will deny that aspect. But to pick one organisation as against another, especially with respect to Bharat Sevadal which showed the way not only to Mysore but to the rest of India, is not proper. The Bharat Sevadal is doing good social work. On account of the fact that it is doing very good work, the Government of India have given an exemption, a privilege in the Mysore State in that it has not got the auxillary training corps. They have said 'the Bharat Sevadal is doing very good work and we do not want to interfere with the voluntary work that they are doing. Therefore, while

establishing auxiliary training corps in other places, we give exemption in certain cases.' While that is so, I am sorry that some of the Hon'ble Members, not knowing the reality, not studying the matter fully, have come forward with comments and I request them to investigate matters and if there is anything wrong, I will be the first to see that it is rectified.

Sri Mulka GOVINDA REDDY.—What we want is that non-official element should nourish it.

Sri A. G. RAMACHANDRA RAO.—The Bharat Sevadal has more non-official element than the Scout movement. I have no quarrel with the Scout movement. The two organisations have different scopes of work; the training given is different. Therefore the work cannot be combined. One works in rural parts ; the other in other parts. One works with students ; the other concentrates on social work, mainly on training children. These are the main differences.

Sri G. DUGGAPPA.—What about text-books ?

Sri A. G. RAMACHANDRA RAO.—Regarding text-books, the Government have taken note of the recommendations made by the Reforms Committee. There is a High Power Committee appointed for text-books, which takes care of the matters.

For buildings we have made a special allotment this year, I believe, in the order of about Rs. 12 lakhs.

Mr. SPEAKER.—The question is :

> "That a sum not exceeding Rs. 4,46,48,000 be granted to the Government to defray the charges which will come in course of payment during the year ending 31st day of March 1956, in respect of 'Education'."

The House will now adjourn for the day and meet at 12 NOON tomorrow.

The House adjourned at Four minutes past Five of the Clock to meet again at Twelve of the Clock on Friday, the 18th March 1955.

WD 4508—GPB—550—14-6-55